ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ**

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಭಾಲ್ಕಿ


ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ಡಾ. ರಘುಶಂಖ ಭಾತಂಬ್ರಾ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**BHALKI:** An Introducing Book on the Places in Karnataka that Played a Major Role in the Freedom Struggle, Written by Dr. Raghushankh Bhatambra, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
೧. ಡಾ. ಎಸ್. ಜಿ. ರಾಮದಾಸ ರೆಡ್ಡಿ
೨. ಡಾ. ಮೃತ್ಯುಂಜಯ ರುಮಾಲೆ
೩. ಶ್ರೀ ನರೇಂದ್ರಕುಮಾರ್ ಎಸ್.ಎಸ್.
೪. ಡಾ. ಪ್ರಕಾಶ ಗ. ಖಾಡೆ
೫. ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೧೦೦೦
ಬೆಲೆ : ರೂ. ೩೦/–
ಪುಟ: ೫೬

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001

ಸ್ವಾತಂತ್ರ್ಯದ ಅಮೃತಮಹೋತ್ಸವ



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೨೫ ಸ್ಥಳಗಳ ಬಗ್ಗೆ ೨೫ ವಿವಿಧ ಲೇಖಕರಿಂದ ಒಟ್ಟು ೨೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೨೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

# ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಫಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು.



ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ, ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ಭಾರತೀಯ ನೆಲದಲ್ಲಿ ಆಕ್ರಮಣಶೀಲ ಪ್ರವೃತ್ತಿ, ಸ್ವಾಧೀನ ಪರಂಪರೆ ಆರ್ಯರಿಂದ ಪ್ರಾರಂಭಗೊಂಡು ಆಂಗ್ಲರವರೆಗೆ ವ್ಯಾಪಿಸಿಕೊಂಡಿದೆ. ಪರಕೀಯರು ಈ ದೇಶಕ್ಕೆ ಬಂದದ್ದು ಕೇವಲ ಸಂಪತ್ತು ಮತ್ತು ಅಧಿಕಾರದ ಆಸೆಗಾಗಿ. ಹಾಗೆ ಬಂದವರೆಲ್ಲ ಭಾರತೀಯರ ಮನಸ್ಸು ಮತ್ತು ಸಂಸ್ಕೃತಿಯ ಮೇಲೆ ಸವಾರಿ ಮಾಡುತ್ತ ತಮ್ಮತನ ಮೆರೆದರು. ಕೊಡು–ಕೊಳ್ಳುವಿಕೆಗೆ ನಾಂದಿ ಹಾಡಿದರು. ಇದಕ್ಕಾಗಿ ಪರಸ್ಪರ ಓಲೈಸುವ ಆದರಿಸುವ ಪ್ರಕ್ರಿಯೆಗಳು ಮೊದಲಿಗೆ ಕಾಣಿಸಿಕೊಂಡವು. ನಂತರದಲ್ಲಿ ಆಕ್ರಮಣಕಾರಿ ನೀತಿಯನ್ನು ಹುಟ್ಟುಹಾಕಿದರು. ಮೊಗಲರು ಇಡೀ ದೇಶವನ್ನಾಳಿದರು. ಕೊನೆಗೆ ಅದೇ ಮುಸ್ಲಿಂ ಅರಸೊತ್ತಿಗೆಗಳ ನಡುವೆ ವಿಭಿನ್ನ ವಿಷಯಗಳಿಗಾಗಿ ಕಲಹ ಏರ್ಪಟ್ಟವು. ಸ್ವಾರ್ಥ, ಹಣ, ಹೆಂಡ, ಹೆಣ್ಣುಗಳಿಗಾಗಿ ಬಡಿದಾಡಿ ನಾಮಾವಶೇಷವಾದರು. ಜಾತಿ, ಪ್ರಾಂತೀಯತೆ, ತೋಳ್ಬಲ ಇತ್ಯಾದಿ ಉದ್ದೇಶದಿಂದ ಕಾಣಿಸಿಕೊಂಡ ರಾಜರು ಪರಸ್ಪರ ಕಚ್ಚಾಡುತ್ತಿದ್ದಾಗಲೇ ವ್ಯಾಪಾರಿ ಮನೋಭಾವದ ಡಚ್ಚರು, ಫ್ರೆಂಚರು, ಇಂಗ್ಲಿಷರು ಒಡೆದಾಳುವ ನೀತಿಯಿಂದಾಗಿ ಭಾರತೀಯರನ್ನೆಲ್ಲ ತಮ್ಮ ಅಡಿಯಾಳಾಗಿಸಿಕೊಂಡರು. ಪರಾಧೀನತೆಯ ಆಂತಕೀಕೃತ ಅಧೀರತೆಯಿಂದ ಬಿಡುಗಡೆಗೊಳ್ಳುವ ಸಲುವಾಗಿ ಭಾರತೀಯರು ಹೋರಾಟ ಮಾಡಿದರು.

ಈ ಹೋರಾಟವು ಸತ್ಯ–ಅಹಿಂಸೆ, ಸಹಕಾರ–ಅಸಹಕಾರ, ಸೌಮ್ಯವಾದಿ–ಉಗ್ರವಾದಿ, ಬಂಧನ–ಬಿಡುಗಡೆ, ಪರಾಧೀನತೆ–ಸ್ವಾತಂತ್ರ್ಯ, ಬಹಿಷ್ಕಾರ–ಸ್ವೀಕಾರ, ವಿದೇಶಿ–ಸ್ವದೇಶಿ, ದೈನ್ಯತೆ–ಸ್ವಾಭಿಮಾನ, ರಾಮರಾಜ್ಯ–ಗ್ರಾಮಸ್ವರಾಜ್ಯ, ಸಂಪತ್ತಿನ ಸಂಗ್ರಹ–ಸ್ವತ್ತಿನ ಅರ್ಪಣೆ, ರಕ್ತಪಾತ–ಮನಃಪರಿವರ್ತನೆ, ಸ್ವಂತಿಕೆ–ಪರಕೀಯತೆ ಇತ್ಯಾದಿ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಭಾರತೀಯರ ಸ್ವಾತಂತ್ರ್ಯ ಹೋರಾಟ ನಡೆಯಿತು. ಇದಕ್ಕಾಗಿ ಲಕ್ಷಾಂತರ ಜನರು ಹೋರಾಟ ಮಾಡಿದ್ದಾರೆ; ಪ್ರಾಣಾರ್ಪಣೆ ಮಾಡಿದ್ದುಂಟು. ಇದೊಂದು ರೋಚಕ ಕಥೆಯಾಗಿದೆ.

ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮದಲ್ಲಿ ಡಾ. ಬಿ. ವಿ. ವಸಂತಕುಮಾರ ಅವರ ನೇತೃತ್ವದ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಸ್ವಾತಂತ್ರ್ಯ: ಅಮೃತ ಮಹೋತ್ಸವದ ಸವಿನೆನಪಿನಲ್ಲಿ ಕರ್ನಾಟಕದ ೭೫ ಸ್ವಾತಂತ್ರ್ಯ ಸಂಗ್ರಾಮದ ಶಕ್ತಿಕೇಂದ್ರಗಳನ್ನು ನೆನಪಿಸಿಕೊಳ್ಳುವ ಬೃಹತ್ ಕಾರ್ಯ ಯೋಜನೆ ಹಾಕಿಕೊಂಡಿದೆ. ಇದೊಂದು ರಚನಾತ್ಮಕ ಮತ್ತು ಮಾದರಿಯ ಕಾರ್ಯವಾಗಿದೆ. ಗತಕಾಲದ ನೆನಪುಗಳನ್ನು ಆಹ್ವಾನಿಸಿಕೊಂಡು ಸಂಭ್ರಮಿಸುವ ಈ ಯೋಜನೆಯನ್ನು ರೂಪಿಸಿರುವ ಸಮಾಜಮುಖಿ ಚಿಂತಕರಾದ ಡಾ. ಬಿ. ವಿ. ವಸಂತಕುಮಾರ್ ಅವರಿಗೆ ಹಾರ್ದಿಕ ಅಭಿನಂದನೆಗಳು. ಇದರ ಶ್ರೇಯಸ್ಸಿಗಾಗಿ ಶ್ರಮಿಸುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಕರಿಯಪ್ಪ, ಆತ್ಮೀಯ ಹಿತೈಷಿಯಾಗಿರುವ ಶ್ರೀ ಹರೀಶ ಅವರಿಗೂ ಹಾಗೂ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗದವರಿಗೂ ಅನಂತ ವಂದನೆಗಳು.

ಈ ಯೋಜನೆಯ ಸಂಪಾದಕರಲ್ಲಿ ಒಬ್ಬರಾಗಿರುವ ಮತ್ತು ನನಗೆ ಈ ಸದಾವಕಾಶವನ್ನು ಒದಗಿಸಿಕೊಟ್ಟ ಡಾ. ಪ್ರಕಾಶ ಜಿ. ಖಾಡೆಯವರಿಗೂ ಅನಂತ ಧನ್ಯವಾದಗಳು. ಬರೆದಿರುವ ವಿಷಯಾಂಶಗಳನ್ನು ಹೊಂದಿಸಿ ಅಕ್ಷರ ಸಂಯೋಜನೆ ಗೈದಿರುವ ಶ್ರೀಮತಿ ಸಂಗೀತಾ ಅವರಿಗೂ, ಧನ್ಯವಾದಗಳು. ನನ್ನ ಬೆಳವಣಿಗೆಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸುತ್ತಿರುವ ಅನಂತ ಚೇತನಗಳಿಗೆ, ಸಹೃದಯರ ಅಮೂಲ್ಯವಾದ ಸಲಹೆ ಸೂಚನೆಗಳಿಗೆ ಸ್ವಾಗತ ಬಯಸುತ್ತ ಎಲ್ಲ ಮಹನೀಯರಿಗೂ ಮತ್ತೊಮ್ಮೆ ಧನ್ಯವಾದಗಳನ್ನು ಸಲ್ಲಿಸುವೆ.

**– ಡಾ. ರಘುಶಂಖ ಭಾತಂಬ್ರಾ**

## ಪರಿವಿಡಿ


| | | |
|---|---|---|
| ಶುಭ ಸಂದೇಶ | | ೩ |
| ಶುಭ ಸಂದೇಶ | | ೫ |
| ಪ್ರಧಾನ ಸಂಪಾದಕರ ಮಾತು | | ೭ |
| ಲೇಖಕರ ಮಾತು | | ೧೧ |
| ೧. | ಐತಿಹಾಸಿಕ ಹಿನ್ನೆಲೆ | ೦೫ |
| ೨. | ಭಾಲ್ಕಿ ಪಿತೂರಿ | ೧೮ |
| ೩. | ಸಾಲಾರ್‌ಜಂಗ್ ಜಾಗಿರಿ ವಿರುದ್ಧ ಹೋರಾಟ | ೨೦ |
| ೪. | ತಿರಂಗಾ ಧ್ವಜ ಆರೋಹಣೆ | ೨೧ |
| ೫. | ಅಂಚೆ ಕಚೇರಿ ಮೇಲೆ ಝುಂಡಾ | ೨೨ |
| ೬. | ರೇಲ್ವೆ ಸೇವೆಗೆ ಧಕ್ಕೆಯನ್ನುಂಟು ಮಾಡುವುದು | ೨೪ |
| ೭. | ನಾರಾಯಣರಾವ ಪವಾರ ಅವರಿಂದ ಬಾಂಬ್ ದಾಳಿ | ೨೫ |
| ೮. | ಗಡಿ ಶಿಬಿರಗಳ ಕಾರ್ಯವೈಖರಿ | ೩೨ |
| ೯. | ಭೀಮಣ್ಣ ಖಂಡ್ರೆಯವರ ಮನೆ ಮೇಲೆ ದಾಳಿ | ೪೦ |
| ೧೦. | ಸ್ವಾತಂತ್ರ್ಯ ಹೋರಾಟಕ್ಕೆ ಮಹಿಳೆಯರ ಕೊಡುಗೆ | ೪೧ |
| ೧೧. | ಆಪರೇಷನ್ ಪೋಲೋ | ೪೪ |
| | ಉಪಸಂಹಾರ | ೪೭ |
| ೧೨. | ಭಾಲ್ಕಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರು | ೪೭ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | | ೫೩ |

## ಐತಿಹಾಸಿಕ ಹಿನ್ನೆಲೆ:

ಕ್ರಿ.ಶ. ಪೂರ್ವ ಕಾಲದಿಂದಲೂ ಪ್ರಸಿದ್ಧಿ ಪಡೆದಿರುವ ಕರ್ನಾಟಕದ ಉತ್ತರ–ಪೂರ್ವ ಭಾಗದಲ್ಲಿರುವ ಬೀದರ ದಖ್ಖನ್ ಪ್ರಸ್ಥಭೂಮಿ. ಸುದೀರ್ಘ ಐತಿಹಾಸಿಕ ಸಾಹಿತ್ಯಿಕ ಪರಂಪರೆಯ, ವಿಭಿನ್ನ ಸಾಂಸ್ಕೃತಿಕ ನೆಲೆಯ, ಸಾಮಾಜೋ–ಧಾರ್ಮಿಕ ಕಳಕಳಿಯ, ವೈವಿಧ್ಯಮಯ ಸಂಪ್ರದಾಯಗಳ, ಜೀವಪರ ಕಾಳಜಿಯ ತಾಣವಾಗಿದೆ. ಪರಧರ್ಮ ಸಹಿಷ್ಣುತೆ, ಉದಾತ್ತ ಮಾನವೀಯ ಮೌಲ್ಯಗಳನ್ನು ತನ್ನೊಡಲಲ್ಲಿ ಗರ್ಭೀಕರಿಸಿಕೊಂಡಿದೆ. ಗೋದಾವರಿಯ ಉಪನದಿಯಾಗಿರುವ ಮಾಂಜರಾ ಹಾಗೂ ಅದರ ಉಪನದಿ ಆಗಿರುವ ಕಾರಂಜಾ ನದಿ ಈ ಜಿಲ್ಲೆಯ ಪ್ರಮುಖ ನದಿಗಳು. ಕಾರಂಜಾ ಜಲಾಶಯ ಜಿಲ್ಲೆಯ ಪ್ರಮುಖ ಜಲಾಶಯವಾಗಿದೆ. ಚಾಲುಕ್ಯ ವಿಜಯಾದಿತ್ಯನ (ಕ್ರಿ.ಶ. ೬೯೭–೯೩೩) ಕಾಲದ ತಾಮ್ರಶಾಸನವು ಬೀದರ ಜಿಲ್ಲೆಯ ಕಾಸರಸಿರ್ಸಿಯಲ್ಲಿ ಪತ್ತೆಯಾಗಿದೆ. ಅದರಲ್ಲಿ 'ಭಲ್ಲುಂಕ್ಕಿ ದೇಶ' ಎಂಬ ಉಲ್ಲೇಖ ಇರುವುದರಿಂದ ಬೀದರ ಜಿಲ್ಲೆಯ ಭಾಲ್ಕಿಯೇ ಆ ಕಾಲಕ್ಕೆ ಈ ವಿಭಾಗದ ಕೇಂದ್ರ ಸ್ಥಳವಾಗಿತ್ತೆಂದು ತಿಳಿದುಬರುತ್ತದೆ. ರಾಷ್ಟ್ರಕೂಟರ ರಾಜ್ಯವು ಕಾವೇರಿಯಿಂದಮಾ ಗೋದಾವರಿ ವರೆಮಿರ್ದುದರಿಂದ ಈ ಭಾಗವೂ ಕೂಡ ಅವರ ಆಳ್ವಿಕೆಗೊಳಪಟ್ಟಿರುವ ಸಾಧ್ಯತೆಗಳಿವೆ.

ಬೀದರ ಪ್ರಾಂತವನ್ನಾಳಿದ ಪ್ರಮುಖ ಅರಸು ಮನೆತನ ಕಲ್ಯಾಣ ಚಾಲುಕ್ಯರದು. ಕ್ರಿ.ಶ. ೧೦೩೩ರ ವೇಳೆಗೆ ಕಲ್ಯಾಣವು ಚಾಲುಕ್ಯರ ಉಪ ರಾಜಧಾನಿಯಾಗಿತ್ತು. ಕ್ರಿ.ಶ. ೯೫೫–೧೧೮೨ರ ವರೆಗೆ ವೈಭವದಿಂದ ಮೆರೆದ ಪ್ರದೇಶವನ್ನು ಚಾಲುಕ್ಯರ ಕಾಲಕ್ಕೆ ಕುಂತಳ ದೇಶದ ಅಟ್ಟಳೆನಾಡು ಎಂದು ಪ್ರಸಿದ್ಧವಾಗಿತ್ತು. ಚಾಲುಕ್ಯ ೨ನೇ ಜಗದೇಕ ಮಲ್ಲನನ್ನು ಬಿಜ್ಜಳ ಸೋಲಿಸಿ ಚಕ್ರವರ್ತಿಯೆಂದು ಘೋಷಿಸಿಕೊಂಡ ಮೇಲೆ ಈ ಭಾಗಕ್ಕೆ ಬಸವಾದಿ ಪ್ರಮಥರಿಂದ ಹೆಚ್ಚಿನ ಪ್ರಖ್ಯಾತಿ ಬಂದಿತು.

ರಂಜೇರಿನ ಶಾಸನ (ಕ್ರಿ.ಶ. ೧೦೯೦–೧೧೧೫)ವೊಂದರಲ್ಲಿ ಸಿಂಧ ಅರಸನಾದ ಜಗತ್ಸೇವ್ಯನು ಅಟ್ಟಳೆನಾಡನ್ನು ಆಳಲು ಬಂದಾಗ ಅವನೊಂದಿಗೆ

ಅಹಿಚ್ಛತ್ರಪುರದಿಂದ ಬಂದಿರುವ ಬ್ರಾಹ್ಮಣರಿಗೆ ಭಲ್ಲುಂಕೆಯನ್ನು ಸರ್ವ ನಮಶ್ಯದಗ್ರಹಾರವನ್ನಾಗಿ ಮಾಡಿಕೊಡಲಾಗಿತ್ತು. ಹಾಗಾಗಿ ಭಾಲ್ಕಿಯು ಪ್ರಾಚೀನ ಅಗ್ರಹಾರವಾಗಿತ್ತು. ಇಲ್ಲಿ ವೇದಾಧ್ಯಯನವು ನಡೆಯುತ್ತಿದ್ದಂತೆ ತೋರುತ್ತದೆ. ಸ್ಥಳೀಯ ಚೆನ್ನಬಸವೇಶ್ವರ ಮಹಾವಿದ್ಯಾಲಯದಲ್ಲಿರುವ ಕ್ರಿ.ಶ. ೧೧೯೯ರ ಶಾಸನದಲ್ಲಿ "ಶ್ರೀಮತು ರಾಜಧಾನಿ ಪಟ್ಟಣ ಭಲ್ಲುಂಕೆಯ ಬ್ರಹ್ಮಪುರಿ ಜನಂಗಳು ಬಾಟಸಂಗೆಯ ಉಪಾಧ್ಯಾಯರಿಗೆ ಹತ್ತು ಗದ್ಯಾಣ"ವನ್ನು ಕೊಟ್ಟಿರುವ ಉಲ್ಲೇಖವಿರುವುದರಿಂದ ಈ ಉಪಾಧ್ಯಾಯರು ಇಲ್ಲಿ ವೇದಾಧ್ಯಯನ ಮಾಡಿಸುತ್ತಿದ್ದರಲ್ಲದೆ ಇತರ ಅಗ್ರಹಾರಗಳಿಗೂ ನೆರವು ನೀಡುತ್ತಿದ್ದರೆಂದು ತೋರುತ್ತದೆ. ಈಗ ಹಳೆಯ ಭಾಲ್ಕಿಯ ದಕ್ಷಿಣ ಭಾಗದಲ್ಲಿರುವ ದೇಶಪಾಂಡೆಗಲ್ಲಿ, ಬ್ರಾಹ್ಮಣಗಲ್ಲಿ ಹಾಗು ಚಾವಡಿವರೆಗಿನ ಭಾಗವೆ ಆ ಕಾಲದ ಬ್ರಹ್ಮಪುರಿ ಯಾಗಿರಬಹುದೆಂದು ಅಭಿಪ್ರಾಯಪಡಲಾಗಿದೆ.

'ಕುಂಬಾರ ಗುಂಡಯ್ಯನ ರಗಳೆ'ಯಲ್ಲಿ– ಭಾಲ್ಕಿಪುರದ ವಿವರಣೆ ಹಾಗು ಅಲ್ಲಿಯ ಕುಂಬಾರ ಗುಂಡಯ್ಯ, ಆತನ ಧರ್ಮಪತ್ನಿ ಕೇತಲದೇವಿಯರ ಕಾಯಕದ ವಿವರವನ್ನು ವೈಶಿಷ್ಟ್ಯಗಳನ್ನು ಹರಿಹರ ಪರಿಚಯಿಸಿದ್ದಾನೆ.

ಉತ್ತಮ ಹವಾಗುಣಕ್ಕೆ ಮನಸೋತ ಬಹಮನಿ ಮನೆತನದ ೯ನೆಯ ಅರಸನಾದ ಒಂದನೇ ಅಹಮದನು ಕ್ರಿ.ಶ. ೧೪೨೯ರಲ್ಲಿ ತನ್ನ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಕ್ಕೆ ವರ್ಗಾಯಿಸಿದನು. ಬಹಮನಿಯರ ನಂತರ ಬೀದರ ಆದಿಲ್‌ಶಾಹಿಗಳ, ನಂತರ ೧೬೫೮ರಲ್ಲಿ ಮೊಗಲರ ವಶವಾಯಿತು.

ಕ್ರಿ.ಶ. ೧೩೨೧ರಲ್ಲಿ ಮೊಹಮ್ಮದ ಬಿನ್ ತುಘಲಕನು ದಾಳಿ ಮಾಡಿ ಕಲ್ಯಾಣ, ಬೀದರ ಕೋಟೆಗಳನ್ನು ವಶಪಡಿಸಿಕೊಂಡಿದ್ದನೆಂದು ಫೆರಿಸ್ತಾ ಎಂಬ ಪ್ರವಾಸಿ ಹೇಳಿರುವುದರಿಂದ ಭಾಲ್ಕಿ ಕೋಟೆಯು ಸಹ ಆತನ ಆಳ್ವಿಕೆ ಗೊಳಪಟ್ಟಿರಬೇಕು. ಕ್ರಿ.ಶ. ೧೩೪೭ರಿಂದ ಬಹಮನಿ, ಬರೀದಶಾಹಿ, ಆದಿಲಶಾಹಿಗಳು ಈ ಪ್ರದೇಶವನ್ನು ಆಳಿದ್ದಾರೆ. ಔರಂಗಜೇಬನು ಕ್ರಿ.ಶ. ೧೬೮೬ರಲ್ಲಿ ಆದಿಲಶಾಹಿಗಳನ್ನು ಸೋಲಿಸಿ ಈ ಭಾಗವನ್ನು ವಶಪಡಿಸಿಕೊಂಡನು. ಮೊಗಲ ದೊರೆ ಬಹಾದೂರ ಶಾಹನ ಪ್ರತಿನಿಧಿಯಾಗಿದ್ದ ದಾವುದಖಾನ ಪನ್ನಿ ಎನ್ನುವವನಿಂದ ಮರಾಠರು ಚೌತ್ ಮತ್ತು ಸರದೇಶಮುಖಿ ತೆರಿಗೆಗಳನ್ನು ವಸೂಲಿ ಮಾಡುತ್ತಿದ್ದರು. ಆನಂತರ ಮೊಗಲ ರಾಜನಾದ ಫರೂಕ್ ಸಿಯಾರ್‌ನು ನಿಜಾಮ್ ಉಲ್ ಮುಲ್ಕನನ್ನು ದಖನ್ ಪ್ರಾಂತದ ವಜೀರನನ್ನಾಗಿ ಮಾಡಿದನು. ಮುಲ್ಕನು ಕಂದಾಯವನ್ನು ಕೊಡುವ ಬದಲು ಭಾಲ್ಕಿ ಮೊದಲಾದ ಪ್ರಾಂತಗಳನ್ನು ಬಿಟ್ಟು ಕೊಟ್ಟನು. ಹಾಗಾಗಿ ಪೇಶ್ವೆಗಳ ಸಾಮಂತನಾಗಿ ಚಂದ್ರಸೇನ ಜಾಧವನು ೧೭೧೪ರಿಂದ ಈ ಭಾಗವನ್ನು ಆಳತೊಡಗಿದನು. ಕ್ರಿ.ಶ. ೧೭೧೪ರಿಂದಲೇ ಭಾಲ್ಕಿ, ಭಾತಂಬ್ರಾ ಕೋಟೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡು ನಾಲ್ಕೈದು ವರ್ಷಗಳಲ್ಲಿ ಪೂರ್ಣಗೊಳಿಸಿರಬೇಕು.



**ಕೋಟೆಗಳು:**

ಭಾಲ್ಕಿ, ಭಾತಂಬ್ರಾ ಕೋಟೆಗಳು ಹೇಳಿಕೊಳ್ಳಬಹುದಾದಷ್ಟು ದೊಡ್ಡವುಗಳಲ್ಲ. ಕರಿಕಲ್ಲು ಹಾಗೂ ಗಾರೆಯನ್ನು ಬಳಸಿ ಕಟ್ಟಲಾದ ಇವು ಚಿಕ್ಕದಾಗಿದ್ದರೂ ಭದ್ರವಾಗಿವೆ. ಎರಡೂ ಕೋಟೆಯ ಗೋಡೆಯ ಮೇಲೆ ಕೈಗಾಡಿ ತಿರುಗಾಡುವಷ್ಟು ಸ್ಥಳವಿದೆ. ಭಾಲ್ಕಿ ಕೋಟೆ ಎರಡು ಪ್ರವೇಶ ದ್ವಾರಗಳನ್ನೊಳಗೊಂಡಿದೆ. ಕೋಟೆಯ ಮುಖ್ಯ ದ್ವಾರವು ಉತ್ತರಾಭಿಮುಖವಾಗಿದೆ. ಉತ್ತರ ದಿಕ್ಕಿನ ಮುಖ್ಯ ದ್ವಾರದ ಮೇಲಿನ ಕೋಣೆಯಲ್ಲಿ ಕರ್ನಾಟಕದ ಏಕೀಕರಣದವರೆಗೂ ನಗಾರಿ ಇತ್ತು. ಇನ್ನೊಂದು ದ್ವಾರವು ಪೂರ್ವಾಭಿಮುಖವಾಗಿದೆ. ತೋಪು ಬಂದೂಕುಗಳನ್ನು ಬಳಸಲು ಅನುಕೂಲವಾಗುವಂತೆ ತಳಪಾಯದಿಂದಲೇ ನಿರ್ಮಿಸಲ್ಪಟ್ಟ ಆರು ಕೊತ್ತಲಗಳಿವೆ. ಕೋಟೆಯ ಆಯುಧಾಗಾರದ ಕೋಣೆಯೊಂದರಲ್ಲಿ ಸೀಸದ ಗುಂಡುಗಳು, ಚಿಕ್ಕ ತೋಪುಗಳು ಹಾಗು ಕಬ್ಬಿಣದ ಪೈಪುಗಳಿರುತ್ತಿದ್ದವು.

ಎರಡು ಕೋಟೆಗಳ ಗೋಡೆ ಹಾಗೂ ಕೊತ್ತಲುಗಳಿಗೆ ಹೊಂದಿ ಕೊಂಡಿರುವ ರಕ್ಷಣಾ ಗೋಡೆಯಲ್ಲಿ ಹಲವಾರು ಕಿಂಡಿಗಳಿವೆ. ಇವುಗಳ ಮುಖಾಂತರ ನೇರವಾಗಿಯೂ, ಎಡ ಬಲ ದಿಕ್ಕುಗಳಲ್ಲಿಯೂ ಗುಂಡು ಹಾರಿಸಲು ಅನುಕೂಲಿಸುವ ಉದ್ದೇಶದಿಂದ ಓರೆಕಿಂಡಿಗಳನ್ನು ಬಿಡಲಾಗಿದೆ. ಒಂದು ವೇಳೆ ಶತ್ರುಗಳು ಕೋಟೆಗೋಡೆಯನ್ನು ಹತ್ತುವ ಪ್ರಯತ್ನ ಮಾಡುತ್ತಿದ್ದರೆ ಅವರ ಮೇಲೆ ಬಿಸಿನೀರು, ಸುಡುವ ಎಣ್ಣೆ ಸುರಿಯಲು ಈ ಕಿಂಡಿಗಳನ್ನು ಉಪಯೋಗಿಸುತ್ತಿದ್ದರು.

ಔರಂಗಜೇಬನ ಸೇನಾಪತಿಯಾಗಿದ್ದ ನಿಜಾಮ್ ಉಲ್ ಮುಲ್ಕನು ಕ್ರಿ.ಶ. ೧೭೨೪ರಲ್ಲಿ ದಖನ್ ಪ್ರಾಂತದಲ್ಲಿ ಸ್ವತಂತ್ರ ನಿಜಾಮ್ ರಾಜ್ಯವನ್ನು ಸ್ಥಾಪಿಸಿ ಭಾಲ್ಕಿಯಲ್ಲಿದ್ದ ಮರಾಠರ ಅಧಿಕಾರವನ್ನು ಕಿತ್ತೊಗೆದನು. ಭಾಲ್ಕಿ ಕೋಟೆಯ ವ್ಯಾಪ್ತಿಯಲ್ಲಿ ಬರುತ್ತಿದ್ದ ಪ್ರದೇಶವನ್ನೇ ಒಂದು ಪೈಗಾ (ವಿಭಾಗ) ಮಾಡಿ ನವಾಬರನ್ನು ನೇಮಿಸಿದನು. ಆ ನವಾಬನು ಭಾಲ್ಕಿ, ಅದರ ಸುತ್ತಲಿನ ಕೆಲವು ಗ್ರಾಮಗಳನ್ನು ಕಾಶೀರಾಯ ದೇಶಮುಖರ ಒಡೆತನಕ್ಕೊಪ್ಪಿಸಿದನು.

ಭಾರತದ ಸ್ವಾತಂತ್ರ ಸಂಗ್ರಾಮದಲ್ಲಿ ಭಾಲ್ಕಿ, ಭಾತಂಬ್ರಾ ಕೋಟೆಗಳು ಪಿತೂರಿ ಕೇಂದ್ರಗಳಾಗಿ ಕೆಲಸ ಮಾಡಿವೆ. ತೊಂಭತ್ತರ ದಶಕದವರೆಗೂ ಕೋಟೆಯ ಆವರಣದಲ್ಲಿ ವ್ಯಾಯಾಮ, ಕಸರತ್ತು ಕಲಿಸುವ ಕೇಂದ್ರಗಳಾಗಿದ್ದವು. ಆರ್.ಎಸ್.ಎಸ್.ನವರು ಹಮ್ಮಿಕೊಳ್ಳುತ್ತಿದ್ದ ದೇಶಭಕ್ತಿ ಮೂಡಿಸುವ, ದೇಶದ ಬಗ್ಗೆ ಜಾಗೃತಿಗೊಳಿಸುವ ಬೈಟಕ್‌ನಂತಹ ಚಟುವಟಿಕೆಗಳು ನಡೆಯುತ್ತಿದ್ದವು. ಭಾತಂಬ್ರಾ ಕೋಟೆಯ ಆವರಣದಲ್ಲಿ ಭಜರಂಗ ಫೂಲಚಂದ ವೈಷ್ಣವ, ಮನೋಹರ ಗಾಮಾ, ಬಸವರಾಜ ಅಮೃತರಾವ ಪಾಟೀಲ ಅವರು ಯುವಕರಿಗೆ ತರಬೇತಿ ನೀಡುತ್ತಿದ್ದರು. ನಸುಕಿನ ೪ ಗಂಟೆಯಿಂದ ಮುಂಜಾನೆ ೭ ಗಂಟೆಯ ವರೆಗೆ ತರಬೇತಿ ಚಟುವಟಿಕೆಗಳು ಜರುಗುತ್ತಿದ್ದವು. ನೂರಾರು ಯುವಕರು ಭಾಗವಹಿಸುತ್ತಿದ್ದದ್ದು ನೆನಪಿದೆ.

## ೨. ಭಾಲ್ಕಿ ತಂತ್ರ:

ಭಾಲ್ಕಿ ತಂತ್ರದ ರೂವಾರಿ ರಾಮರಾವ ಅಲಿಯಾಸ ಜಂಗ್ ಬಹದ್ದೂರ್. ರಾಮರಾವ ಮತ್ತು ಆತನ ಸಂಗಡಿಗರಾದ ಬಾಲಕೃಷ್ಣ, ವಿಠೋಬಾ, ಭೀಮರಾವ, ವಿಠೋಬಾ ಮತ್ತಿತರರನ್ನು ೧೮೬೭ರಲ್ಲಿ ಬೀದರ ಜಿಲ್ಲೆಯ ಭಾಲ್ಕಿ ಸಮೀಪದ ಅಷ್ಟಿಯಲ್ಲಿ ಭಗವಾ ಧ್ವಜ ಹಾರಿಸಿ ಬಂಡಾಯವೆದ್ದರು. ಈ ಬಗ್ಗೆ ಹೆಚ್ಚಿನ ವಿವರವುಳ್ಳ ಡಾ. ರಘುಶಂಖ ಭಾತಂಬ್ರಾ ಅವರ 'ಬೀದರ ಪ್ರದೇಶದ ಸ್ವಾತಂತ್ರ್ಯ ಸಂಗ್ರಾಮ'ವೆಂಬ ಬೃಹತ್‌ಸಂಪುಟ ಅವಲೋಕಿಸಬಹುದು.

ಹೈದ್ರಾಬಾದಿನ ದೇಶಿ ಸರಕಾರ ಮತ್ತು ಬ್ರಿಟಿಷ್ ಸರಕಾರದ ವಿರುದ್ಧ ಹೈದ್ರಾಬಾದ್‌ನಲ್ಲಿ ಒಳಸಂಚು ನಡೆದಿದೆಂದು ತೀರ್ಮಾನಿಸಲಾಯಿತು. ಇದರ ವಿಚಾರಣೆಗಾಗಿ ನಿಜಾಮ ಸರಕಾರವು ಭಾಲ್ಕಿಯ ಶಂಕರರಾವ ದೇಶಪಾಂಡೆ ಎಂಬ ವಿಶೇಷ ಅಧಿಕಾರಿಯನ್ನು ನಿಯೋಜಿಸಿತ್ತು. ಆತನು ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸಿ ಜಂಗ್ ಬಹಾದ್ದೂರ ಹಾಗೂ ಆತನ ಸಹಚರರನ್ನು ಬಂಧಿಸಿ ಭಾಲ್ಕಿಯ ನವಾಬನಾಗಿದ್ದ ಅಮೀರ–ಎ–ಕಬೀರ್ ಶಮಶುಲ್ ಓಮರ್‌ಗೆ ಒಪ್ಪಿಸಿದನು. ವಿಕಾರ ಉಲ್ ಉಮರ್‌ನಾಗಿದ್ದ ಫೈಜ ಮಹ್ಮದ ಖಾನ, ಭಾಲ್ಕಿಯ ಉಪಾಧಿಕಾರಿಗಳಾದ ಫಜಲ್ ಅಲಿ ಪ್ರಕರಣವನ್ನು ಭೇದಿಸಿದರು. ಯಶವಂತರಾವ ಮತ್ತಿತರರು ಸೇರಿ ರಾಮರಾವ ಅಲಿಯಾಸ ಜಂಗ್ ಬಹಾದ್ದೂರನೊಂದಿಗೆ ಚಿತಾವಣೆ ಮಾಡಿ ದೊಡ್ಡ ಮೊತ್ತದ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂಬ ಆರೋಪವು ಅವರ ಮೇಲಿತ್ತು. ಇಂದರವಾಡಾದ ಪಟೇಲನ ಸೋದರ ಹಣಮಂತರಾವ ಪಟೇಲನು ಇವರೆಲ್ಲರ ನಡುವೆ ಪತ್ರ



ವ್ಯವಹಾರದ ಮಧ್ಯಸ್ಥಿಕೆವಹಿಸಿದ್ದನು. ಭಾಲ್ಕಿ ತಾಲ್ಲೂಕಿನ ಖುದಾವಂದಪೂರದ ಕಡಾಜಿ ಪಾಟೀಲ ಮತ್ತು ಭಾಲ್ಕಿ ತಾಲೂಕಿನ ನಿರ್ಮಲಮಪಲ್ಲಿ (>ನೀಲಮನಳ್ಳಿ) ನಾಗೋಜಿ ಪಟೇಲ ಈ ಘಟನೆಯ ಸಾಕ್ಷಿದಾರರಾಗಿದ್ದರು.

ಬ್ರಿಟಿಷರ ಮತ್ತು ನಿಜಾಮರ ಹಿತಾಸಕ್ತಿಗಳಿಗೆ ಧಕ್ಕೆ ಆಗದ ರೀತಿಯಲ್ಲಿ, ಬಂಧಿತ ಕೈದಿಗಳನ್ನು ಸ್ಥಾನಿಕಾಧಿಕಾರಿಗಳಲ್ಲಿಗೆ ಕಳುಹಿಸಿಕೊಡುವಲ್ಲಿ ನಿಜಾಮ್ ಸರ್ಕಾರದ ಮಂತ್ರಿ ಸಾಲಾರಜಂಗ್‌ರು ಈ ಬಗ್ಗೆ ವಿಶೇಷ ಕಾಳಜಿವಹಿಸಿದ್ದರು. ಸಹಾಯಕ ಸ್ಥಾನಿಕಾಧಿಕಾರಿಯ ವಿಚಾರಣೆಯಿಂದ ಕಂಡು ಬಂದಿದ್ದೇನೆಂದರೆ, ಬಂಡಾಯ ಪ್ರಚೋದಿಸುತ್ತಿದ್ದ ವ್ಯಕ್ತಿಗಳ ಕಾರ್ಯಾಚರಣೆ ಬಡಾಯಿ ಕೊಚ್ಚಿಕೊಳ್ಳುವುದು ಆಗಿತ್ತೇ ವಿನಃ ಅಪಾಯಕಾರಿಯಾಗಿರಲಿಲ್ಲ. ಸಾತಾರಾ ರಾಜವಂಶದೊಂದಿಗೆ ವಿಶೇಷ ಸಂಬಂಧ ಹೊಂದಿದ್ದ ಮತ್ತು 'ಜಂಗ್ ಬಹದ್ದೂರ್' ಎಂದು ಸ್ವಯಂ ಕರೆದುಕೊಳ್ಳುತ್ತಿದ್ದ ರಾಮರಾವ ಹೇಳಿಕೆಯಿಂದ ತಿಳಿದು ಬರುವುದೇನೆಂದರೆ, ದಖ್ಖನ್‌ನಲ್ಲಿ ಹೇಗೆ ಸಾತಾರಾದಲ್ಲಿಯೂ ಮರಾಠಿಗರ ಆಳ್ವಿಕೆಯನ್ನು ಪುನರ್ ಸ್ಥಾಪಿಸಲು, ಮರಾಠಾ ಪಟೇಲ, ಪಟವಾರಿಗಳು ಉದಾರ ಹಸ್ತ ಚಾಚಿ ಅಗತ್ಯ ಸೌಲಭ್ಯಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು. ಶಿವಾಜಿ ವಂಶದ ಉತ್ತರದಾಯಿತ್ವ ಹೊಂದಿದ ಮರಾಠಾ ಪ್ರಜ್ಞೆಯನ್ನು ಉದ್ದೀಪನಗೊಳಿಸಿ ಬ್ರಿಟಿಷರ ಮತ್ತು ಮಹ್ಮದೀಯರ ಹಿಡಿತದಿಂದ ಸಾತಾರಾವನ್ನು ಮುಕ್ತಗೊಳಿಸುವುದೇ ಅದರ ಹಿಂದಿನ ಬಂಡಾಯದ ಉದ್ದೇಶವಾಗಿತ್ತು ಎಂದು ಕಂಡುಕೊಂಡಿದ್ದರು.

ಹೈದ್ರಾಬಾದ್ ರಾಜ್ಯ ಸಮಿತಿಯು ೧೯೫೬ರಲ್ಲಿ ಪ್ರಕಟಿಸಿದ 'ದಿ ಫ್ರೀಡಮ್ ಸ್ಟ್ರಗಲ್ ಇನ್ ಹೈದರಾಬಾದ–ಎ ಕನೆಕ್ಟೆಡ್ ಅಕೌಂಟ್' ದ್ವಿತೀಯ ಸಂಪುಟದ ೧೧ನೆಯ ಅಧ್ಯಾಯದಲ್ಲಿ 'ದಿ ಭಾಲ್ಕಿ ಕಾನ್ಸಪಿರಸಿ' ಶೀರ್ಷಿಕೆಯಲ್ಲಿ ಈ ವಿವರಗಳು ಅಡಕಗೊಂಡಿವೆ. ೧೯೫೬ರ ವರೆಗೆ ಇತಿಹಾಸದ ಪುಟಗಳಲ್ಲಿ ಹೂತುಹೋಗಿದ್ದ ಈ ಐತಿಹಾಸಿಕ ಘಟನೆ ಬೆಳಕಿಗೆ ಬಂದದ್ದು ಒಂದು ಆಶ್ಚರ್ಯವೇ ಸರಿ. ಭಾರತದ ಇತಿಹಾಸದಲ್ಲಿ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ಮಿರತ್‌ನಲ್ಲಿ ಪ್ರಾರಂಭಗೊಂಡು ಮಂಗಲಪಾಂಡೆಯ ಸಾವಿನೊಂದಿಗೆ ಉಗ್ರರೂಪ ಪಡೆದುಕೊಂಡು ರಾಮರಾವ ಮತ್ತು ಅವರ ಸಂಗಡಿಗರೊಂದಿಗೆ ನಡೆದ ಈ ಹೋರಾಟವು ೧೮೬೭ರಲ್ಲಿ ಭಾಲ್ಕಿಯಲ್ಲಿ ಅಂತ್ಯಗೊಂಡಿತು. ಬೀದರ ಜಿಲ್ಲೆಯ ಭಾಲ್ಕಿ ಸುತ್ತಲಿನ ಜನರೂ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು ಎನ್ನುವ ವಿಷಯ ಇದರಿಂದ ಮನದಟ್ಟಾಗುತ್ತದೆ. ಈ ಪಿತೂರಿಯ ಯತ್ನ

ರಾಷ್ಟ್ರವ್ಯಾಪಿಯಾಗಿರದೆ, ಭಾಲ್ಕಿಗೆ ಮಾತ್ರ ಸಿಮೀತವಾಗಿದ್ದರೆ, ರಾಮರಾವ ಭಾಲ್ಕಿ ಜನರ ಸಹಕಾರದೊಂದಿಗೆ ಪ್ರಾಯಶಃ ಯಶಸ್ಸು ಸಾಧಿಸಬಹುದಿತ್ತು. ತುಂಬು ಮನಸಾರೆಯ ಬೆಂಬಲದ ಕೊರತೆ, ಸಾಕಷ್ಟು ಪ್ರಮಾಣದ ಪೂರ್ವಸಿದ್ಧತೆ ಇಲ್ಲದ್ದರಿಂದ ಹಾಗೂ ಹಣಕಾಸಿನ ಕೊರತೆಯಿಂದ ಭಾಲ್ಕಿ ಪಿತೂರಿ ವಿಫಲವಾಯಿತು. ಇದನ್ನು "೧೮೫೭ರಲ್ಲಿ ಆರಂಭಗೊಂಡ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅಂತಿಮ ಪ್ರತಿಧ್ವನಿಯ ಕಹಳೆ ಮೊಳಗಿದ್ದು ೧೮೬೭ರ ಭಾಲ್ಕಿಯಲ್ಲಿ" ಎಂದು ಪಿ. ಸೇತು ಮಾಧವರಾವ ಹೇಳಿದ್ದಾರೆ. ಈ ಒಂದು ಘಟನೆ ಇಲ್ಲಿಯ ಜನರಲ್ಲಿ ಹೆಮ್ಮೆ ಮೂಡಿಸುವುದು ಎಂಬುದರಲ್ಲಿ ಯಾವುದೇ ಅನುಮಾನವೇ ಇಲ್ಲ!

## ೩. ಸಾಲಾರ್‌ಜಂಗ್ ಜಾಗಿರಿ ವಿರುದ್ಧ ಹೋರಾಟ:

ಭಾಲ್ಕಿ ಆರ್ಯ ಸಮಾಜದ ಪ್ರಮುಖ ಶಾಖೆಯಾಗಿತ್ತು. ತಮ್ಮ ನಿಷ್ಠಾವಂತಿಕೆ, ಸೇವಾಭಾವದಿಂದ ಪ್ರಸಿದ್ಧವೂ ಆಗಿತ್ತು. ಇದನ್ನರಿತ ಕೊಪ್ಪಳ ಸಂಘಟನೆಯವರು ಸಾಲಾರ್‌ಜಂಗ್ ಜಹಗೀರಿಯಲ್ಲಿ ೧೪ ಹಳ್ಳಿಗಳನ್ನು ಮುಕ್ತಗೊಳಿಸುವ ಸಲುವಾಗಿ ವಿರುದ್ಧ ಹೋರಾಡಲು ಭಾಲ್ಕಿ ಮತ್ತು ಚಿಟಗುಪ್ಪ ಆರ್ಯ ಶಾಖೆಯ ಕಾರ್ಯಕರ್ತರನ್ನು ಆಹ್ವಾನಿಸಿದ್ದರು. ಅವರ ಆಹ್ವಾನದ ಮೇರೆಗೆ ೧೯೩೮ರಲ್ಲಿ ಆರ್ಯ ಸಮಾಜದವರು ಕೊಪ್ಪಳಕ್ಕೆ ಹೋಗಿ ಸಾಲಾರಜಂಗ್ ಜಹಗೀರಿಯ ವಿರುದ್ಧ ದಂಗೆ ಎದ್ದರು.

ಈ ಹೋರಾಟದಲ್ಲಿ ಬಸಯ್ಯ ಶಾಂತಗಿರಿ ಅಧ್ಯಕ್ಷರಾಗಿದ್ದರು. ಅನಂತರಾವ ಕುಲಕರ್ಣಿಯವರು ಉಪಾಧ್ಯಕ್ಷರಾಗಿದ್ದರು. ಇವರಲ್ಲದೆ ಭಾಲ್ಕಿಯ ಮಹಾದೇವಪ್ಪ ಲೋಖಂಡೆ, ಜಗನ್ನಾಥ ನಾಯಕ, ಬಾಳಾರಾಮ ಫುಲಾರಿ, ಕಿಶನ ವಾಮನರಾವ ಚೌಧರಿ, ಬಳವಂತರಾವ ಗುಂಡೇರಾವ, ಮಡಿವಾಳಯ್ಯ ಮಾದಯ್ಯ ಸ್ವಾಮಿ, ಕಿಶನರಾವ ಕಾಸರಸಿರ್ಸೆ, ವಿಠ್ಠಲರಾವ ಕರಿಮನಗರ, ಚಂದ್ರಶೇಖರ ಶಾಸ್ತ್ರಿ ಸೇರಿದಂತೆ ೨೬ ಜನ ಕಾರ್ಯಕರ್ತರು ಪಾಲ್ಗೊಂಡಿದ್ದರು. ಇವರು ಗುಡ್ಡದೂರು, ತಗ್ಗಲದೋಣಿ, ಮಾಲಗತ್ತಿ, ನಿಲುಗಲ್‌ಗಳಲ್ಲಿಯ ನಿಜಾಮನ ಸೈನಿಕರೊಡನೆ ಹೋರಾಡುವಾಗ ಸ್ಟೇನ್‌ಗನ್, ಕ್ಯಾಪಗನ್, ೩೦೩, ೪೧೦, ಕೈಬಾಂಬ್‌ಗಳನ್ನು ಬಳಸಿದ್ದರೆಂದು ಮಹಾರುದ್ರಪ್ಪ ಸಿರ್ಸೆಯವರಿಂದ ಗೊತ್ತಾಗುತ್ತದೆ. ಮುಂದುವರೆದು ಕೊಪ್ಪಳದಲ್ಲಿ 'ವಂದೇಮಾತರಂ' ಘೋಷಿಸಿ ಧ್ವಜಾರೋಹಣ ಮಾಡಿದರು. ಕೊಪ್ಪಳ ಪೊಲೀಸರು ಇವರನ್ನೆಲ್ಲ ಬಂಧಿಸಿ ಕೋರ್ಟಿಗೆ ಹಾಜರುಪಡಿಸಿದರು.



'ಆರ್ಯ ಸಮಾಜ ಜಿಂದಾಬಾದ್ । ನಿಜಾಂ ಸರ್ಕಾರ ಮುರ್ದಾಬಾದ್' ಎಂದು ಜಯಘೋಷ ಮಾಡಿದ್ದಕ್ಕಾಗಿ ಹಾಗೂ ಧ್ವಜಾರೋಹಣ ಗೈದಿದ್ದಕ್ಕಾಗಿ ಕೋರ್ಟಿನ ನ್ಯಾಯಾಧೀಶರು ಕ್ಷಮೆ ಕೇಳಲು ಆಗ್ರಹಿಸಿದರು. ಇವರ್‍ಯಾರು ಕೋರ್ಟ್‌ನಲ್ಲಿ ಕ್ಷಮೆ ಕೇಳಲಿಲ್ಲ. ಹಾಗಾಗಿ ನ್ಯಾಯಾಧೀಶರು ಇವರೆಲ್ಲರಿಗೂ ನಾಲ್ಕು ತಿಂಗಳು ಜೈಲು ಶಿಕ್ಷೆ ವಿಧಿಸಿದರು.

ಕೋರ್ಟ್‌ನಿಂದ ಹೊರಗಡೆ ಬಂದಾಗ ಆರ್ಯ ಸಮಾಜದ ಕಾರ್ಯಕರ್ತರು ಈ ಮೊದಲಿನ ಘೋಷಣೆಯನ್ನು ಪುನರುಚ್ಚರಿಸಿದರು. ನಿಜಾಂ ಸರ್ಕಾರದ ವಿರುದ್ಧ ಮತ್ತೆ ಜಯಘೋಷ ಮಾಡಿದರು. ಜೈಲಿನಲ್ಲಿಯೂ ಗದ್ದಲ ಮಾಡಿದ್ದರು. ಇವರೊಂದಿಗೆ ಲಾತೂರಿನ ಸತ್ಯಾಗ್ರಹಿಗಳು ಕೈ ಜೋಡಿಸಿದ್ದರಿಂದ ಕೊಪ್ಪಳ ಜೈಲಿನಲ್ಲಿ ಗದ್ದಲವಾಗುತ್ತಿತ್ತು. ಜೈಲಿನ ಅಧಿಕಾರಿಗಳಿಗೆ ಇವರ ಮೇಲೆ ನಿಯಂತ್ರಣ ಸಾಧಿಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಕೊಪ್ಪಳ ಪೊಲೀಸರು ಇವರನ್ನೆಲ್ಲ ಹೈದರಾಬಾದಿನ ಚಂಚಲಗುಡ್ಡಾ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಿದರು. ರೈಲಿನಿಂದ ಕಾರಾಗೃಹದ ಎದುರುಗಡೆ ಬಂದಾಗ ಒಬ್ಬ ಕೈದಿ ತಪ್ಪಿಸಿಕೊಂಡದ್ದು ಜೈಲರ್ ಗಮನಕ್ಕೆ ಬಂದಿತು. ಇದರಿಂದ ಜೈಲಿನ ಅಮೀನ್ ಸಾಹೇಬನನ್ನು ಸಸ್ಪೆಂಡ್ ಮಾಡಲಾಯಿತೆಂದು ವೀರಶೆಟ್ಟಿ ಬಾವುಗೆಯವರು ದಾಖಸಿದ್ದಾರೆ.

## ೪. ತಿರಂಗಾ ಧ್ವಜ ಆರೋಹಣೆ:

೧೫-೮-೪೭ರಿಂದ ೦೧.೧೨.೧೯೪೮ರ ವರೆಗೆ ಬೀದರ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ರಾಷ್ಟ್ರೀಯ ಧ್ವಜ ಹಾರಿಸಲಾಯಿತು. ರಾಷ್ಟ್ರೀಯ ಧ್ವಜ, ವಂದೆಮಾತರಂ ಗೀತೆಯು ಸ್ವಾತಂತ್ರ್ಯ ಚಳುವಳಿಗಾರರಿಗೆ ಹೆಮ್ಮೆಯ ವಿಷಯವಾದರೆ ನಿಜಾಮ ಪ್ರಭುತ್ವದ ಹಿಂಬಾಲಕರು, ರಜಾಕಾರರು ಅದು ತಮಗಾದ ಅಪಮಾನವೆಂದು ಭಾವಿಸುತ್ತಿದ್ದರು. ಹಾಗಾಗಿ ಅನೇಕ ರೀತಿಯಲ್ಲಿ ದಂಗೆ, ಹಿಂಸಾಚಾರ, ಮತೀಯ ಅವಾಂತರಗಳು ಸಂಭವಿಸಿದವು.

೦೨.೦೯.೧೯೪೭ರಂದು ಮಹಾರುದ್ರಪ್ಪ ಸಿರ್ಸೆ ಮತ್ತು ಅವರ ಗೆಳೆಯರು ಭಾಲ್ಕಿಯ ವಿಠ್ಠಲ ಗುಡಿಯ ಮೇಲೆ ರಾಷ್ಟ್ರೀಯ ಧ್ವಜಾರೋಹಣ ಮಾಡಿದರು. ನಿಜಾಮ ಸರ್ಕಾರ ಹೊರಡಿಸಿದ ವಾರಂಟ್‌ನಿಂದ ತಪಿಸಿಕೊಳ್ಳಲು ಅವರು ಭೂಗತರಾದರು.

ಭಾಲ್ಕಿ ತಾಲೂಕಿನ ಚಳಕಾಪುರದಲ್ಲಿ ೧೯೪೭ರ ಅಗಸ್ಟ್ ೧೫ ರಂದು ಚಿಟಗುಪ್ಪದ ಹಣಮಂತರಾವ ಅಂಬಾಜಿ ಆರ್ಯ ಅವರ ನೇತೃತ್ವದಲ್ಲಿ ರಾಷ್ಟ್ರಧ್ವಜ

ಹಾರಿಸಿದರು. ಈ ಕಾರ್ಯಕ್ರಮದಲ್ಲಿ ಶಂಕರರಾವ ಕುಲಕರ್ಣಿ, ರಾಮಣ್ಣ ಉಪ್ಪಾರ, ಶೇಷಪ್ಪ ವಿಶ್ವಕರ್ಮ, ಕರಬಸಪ್ಪ ಹೆಗ್ಗೆ, ಸಜ್ಜನಶೆಟ್ಟಿ ಮೊದಲಾದವರು ಭಾಗವಹಿಸಿದ್ದರು. ದುಬಲಗುಂಡಿ ಪೊಲೀಸರು ಧ್ವಜ ಇಳಿಸಿ ಪಂಚನಾಮೆ ಮಾಡಿದರು.

ಧ್ವಜ ಹಾರಿಸಿದ್ದಕ್ಕಾಗಿ ಪೊಲೀಸರು ಹಲವರನ್ನು ಬಂಧಿಸಿದರು. ಆದರೆ ಹಣಮಂತರಾವ ಆರ್ಯ ಆ ದಿನ ಪೊಲೀಸರ ಕೈಗೆ ಸಿಗಲೇ ಇಲ್ಲ. ಆಮೇಲೆ ವಾರಂಟ್ ಜಾರಿಗೊಳಿಸಿ ಬಂಧಿಸಿದರು. ನಂತರ ಜಾಮೀನಿನ ಮೇಲೆ ಬಿಡುಗಡೆಗೊಂಡು ಭೂಗತರಾದರು. ಹಕೀಕತರಾಯರ ನಾಯಕತ್ವದಲ್ಲಿ ಮೈದರ್ಗಿ ಶಿಬಿರದಲ್ಲಿ ಶರಣಾರ್ಥಿಗಳ ಸೇವೆ ಮಾಡಿದ ಶ್ರೇಯಸ್ಸು ಹಣಮಂತರಾಯ ಆರ್ಯರಿಗೆ ಸಲ್ಲುತ್ತದೆ.

ಅದೇ ರೀತಿಯಲ್ಲಿ ಹೊನ್ನಳ್ಳಿ, ಹಾಳಗೋರ್ಟಾ, ಗೋರ್ಟಾ, ಉದಗಿರ, ಜಹಿರಾಬಾದ, ಹುಡಗಿ, ಚಿಟಗುಪ್ಪ, ಕೋಹಿರಗಳಲ್ಲಿ ತಿರಂಗಾ ಧ್ವಜ ಆರೋಹಣ ಮಾಡಿದ್ದರಿಂದ ಉಂಟಾದ ರಕ್ತಪಾತ ಅಷ್ಟಿಷ್ಟಲ್ಲ! ಮತೀಯ ಗಲಭೆಗಳಿಂದಾಗಿ ಎಷ್ಟೋ ಜನರು ಪ್ರಾಣ ಕಳೆದುಕೊಂಡರು. ಹೆಂಡತಿ, ಮಕ್ಕಳು, ಮನೆ, ಆಸ್ತಿಯಿಂದ ದೂರಾದರು.

ಮುರಳಿಧರ ಕಾಮತೀಕರ ನೇತೃತ್ವದಲ್ಲಿ ರಾಚಯ್ಯ ಸಂಗಯ್ಯ ಸ್ವಾಮಿ, ಮೇಥಿ ಮೇಳಕುಂದಿಯ ರಾಮರಾವ ಕುಲಕರ್ಣಿ, ಸಿದ್ರಾಮಪ್ಪ ಕೊಳಾರೆ, ಗುರುಲಿಂಗಪ್ಪ ಮಹಾಗಾಂವ, ಬಸವಂತಪ್ಪ ಬೀದಿಯವರು ೨–೯–೧೯೪೭ರಂದು ಬೀದರ ನಗರದ ಫತೇ ದರವಾಜಾ, ಚೌಬಾರ, ಪನ್ನಾಲ್ ತಾಲೀಮ್ ಮುಂತಾದ ಕಡೆಗಳಲ್ಲಿ ರಾಷ್ಟ್ರಧ್ವಜ ಹಾರಿಸುತ್ತಿದ್ದ ಸಂದರ್ಭದಲ್ಲಿ ಪೊಲೀಸರ ಕೈಗೆ ಸಿಕ್ಕರು. ಬೀದರ ಕೇಂದ್ರ ಕಾರಾಗೃಹಗಳಲ್ಲಿ ಇವರನ್ನೆಲ್ಲ ಕೂಡಿ ಹಾಕಿ ಹಿಂಸೆ ನೀಡಿದ್ದಾರೆಂದು ಡಾ. ಸುಧೀರ ಕಾಮತೀಕರ ತಿಳಿಸಿದ್ದಾರೆ.

### ೫. ಅಂಚೆ ಕಚೇರಿ ಮೇಲೆ ಝಂಡಾ:

ನಿಜಾಂ ಕಾಲಾವಧಿಯಲ್ಲಿ ಭಾಲ್ಕಿಯ ಮುಖ್ಯ ಕಟ್ಟಡ ಅಂಚೆ ಕಚೇರಿ. ಇದರ ಮೇಲೆ ತಿರಂಗಾ ಧ್ವಜ ಹಾರಿಸಲು ಜಗನ್ನಾಥರಾವ ನಾಯಿಕ, ಮಹಾರುದ್ರಪ್ಪ ಸಿರ್ಸೆ, ಶಂಕರರಾವ ರೀಪು, ಅಣ್ಣಾರಾವ ಪಾಟೀಲರು ಗುಪ್ತವಾಗಿ ನಿರ್ಧರಿಸಿ ಕಾರ್ಯಪ್ರವೃತ್ತರಾದರು. ಭಾಲ್ಕಿಯ ಅಂಚೆ ಕಚೇರಿಯ ಮೇಲಿದ್ದ ನಿಜಾಮನ ಹಳದಿ ಧ್ವಜವನ್ನು ತೆಗೆದುಹಾಕಿ ತಿರಂಗಾ ಧ್ವಜ ಹಾರಿಸಿದರು. ಆಗ ಇವರ ಮೇಲೆ ದೇಶದ್ರೋಹದ ಮೊಕದ್ದಮೆ ಹೂಡಲಾಯಿತು. ಫೌಜದಾರಿ ಮೊಕದ್ದಮೆ ನೋಂದಣಿ ಸಂಖ್ಯೆ ೩/೧೩೫೬ ಪೊಲೀಸ್ ಭಾಲ್ಕಿ ವಿರುದ್ಧ ಜಗನ್ನಾಥರಾವ ನಾಯಿಕ, ಮಹಾರುದ್ರಪ್ಪ ಸಿರ್ಸೆ ಮತ್ತು ಇತರರು ಎಂದು ಪ್ರಕರಣ ದಾಖಲಿಸಲಾಯಿತು. ಈ ಪ್ರಕರಣದಲ್ಲಿ ಭಾಗಿಗಳಾದ ಇತರರ ಹೆಸರು ಇಂತಿವೆ. ಗೋವಿಂದ, ವಾಸುದೇವ, ಮಲ್ಲಿಕಾರ್ಜುನ, ರಾಮರಾವ, ಸದಾಶಿವ, ನಾನಾಶಾಸ್ತ್ರೀ, ಕೇಶವಶಾಸ್ತ್ರಿ, ರೀಪು ಶಂಕರ, ಗೋವಿಂದರಾವ, ರಾಘವೇಂದ್ರರಾವ, ಕರಮಚಂದ, ಗುರುನಾಥರಾವ, ನಾಗನಾಥರಾವ, ಗುರಪ್ಪಾ, ಶಂಕರ, ವೀರಭದ್ರಪ್ಪಾ, ಶಂಕರರಾವ, ನಾರಾಯಣರಾವ, ಮಾಣಿಕರಾವ, ಭೀಮಣ್ಣಾ, ವಾಸುದೇವರಾವ, ಮಚಿಂದ್ರರಾವ, ಅಣ್ಣಾರಾವ ಮತ್ತು ಶಂಕರೆಪ್ಪಾ. ಇವರೆಲ್ಲರು ಭಾಲ್ಕಿ ನಿವಾಸಿಗಳಾಗಿದ್ದರು. ಇವರೆಲ್ಲರ ಮೇಲೆ ಸರಕಾರ ವಿರೋಧಿ ಕೆಲಸದಲ್ಲಿ ತೊಡಗಿದ್ದಾರೆಂದು ಮೊಕದ್ದಮೆ ಹೂಡಿ, ಎಲ್ಲರನ್ನು ಬೀದರಿನ ಕೋರ್ಟ್‌ನಲ್ಲಿ ಹಾಜರುಪಡಿಸಲಾಯಿತು.

ನಿಜಾಮ ಸರಕಾರವು ಆರ್ಯ ಸಮಾಜವನ್ನು ಕಾನೂನುಬಾಹಿರ ಸಂಘಟನೆ ಎಂದು ಘೋಷಿಸಿತ್ತು. ಅದರ ಚಟುವಟಿಕೆಗಳಲ್ಲಿ ಭಾಗಿಯಾಗುವವರ ಮೇಲೆ ಸುಳ್ಳು ಅಪಾದನೆ ಹೊರಿಸಿ, ಮೊಕದ್ದಮೆ ಹೂಡಿ ಅವರನ್ನು ಜೈಲಿಗೆ ಹಾಕಲಾಗುತ್ತಿತ್ತು ಹಾಗು ಅವರ ಮನೆ ಆಸ್ತಿಯನ್ನು ಜಪ್ತಿ ಮಾಡಿಕೊಂಡು ಹೊರಹಾಕಲಾಗುತಿತ್ತು. ಒಂದು ವೇಳೆ ಅವರು ಲಿಖಿತ ರೂಪದಲ್ಲಿ ಭವಿಷ್ಯದಲ್ಲಿ ಸರಕಾರದ ವಿರುದ್ಧ ಯಾವುದೇ ಕಾರ್ಯವೆಸಗುವುದಿಲ್ಲವೆಂದು ಬರೆದುಕೊಟ್ಟರೆ ಕೇಸಿನಿಂದ ಮುಕ್ತರಾಗುತ್ತಿದ್ದರು. ಆದರೆ ಮಹಾರುದ್ರಪ್ಪ ಸಿರ್ಸೆಯವರು ಜೈಲಿನಲ್ಲಿದ್ದಾಗ ಈ ಪ್ರಸ್ತಾವ ಅವರಿಗೆ ಕಳುಹಿಸಲಾಯಿತು. ಆಗ ಅವರು "ರಾಣಾ ಪ್ರತಾಪಸಿಂಹ ಮತ್ತು ಭಗತ್‌ಸಿಂಗ್ ನಮ್ಮ ಆದರ್ಶರಾಗಿದ್ದಾರೆ. ನಾವು ನಿಜಾಮರ ಕ್ಷಮೆ ಕೇಳವುದಕ್ಕಿಂತ ಜೈಲಿನಲ್ಲೆ ಸಾಯಲು ಇಚ್ಛೆಪಡುತ್ತೇವೆ" ಎಂದು ಹೇಳಿಕೆ ನೀಡಿದರು.

ಈ ಮೇಲ್ಕಂಡ ೨೬ ಜನರಲ್ಲಿ ಜಗನ್ನಾಥರಾವ ನಾಯಿಕ ಮತ್ತು ಮಹಾರುದ್ರಪ್ಪ ಸಿರ್ಸೆಯವರನ್ನು ಹೊರತುಪಡಿಸಿ ಉಳಿದವರೆಲ್ಲರು ತಾವು ನಿಜಾಮ ಸರಕಾರದ ವಿರೋಧಿಗಳಲ್ಲ, ಆರ್ಯ ಸಮಾಜದ ಕಾರ್ಯಕರ್ತರು ಮತ್ತು ಕಾಂಗ್ರೆಸಿಗರು ಕೂಡ ನಾವು ಅಲ್ಲವೆಂದರು. 'ನಾವೆಲ್ಲ ಸರಕಾರಕ್ಕೆ ನಿಷ್ಠಾವಂತರಾಗಿದ್ದೇವೆ' ಎಂದು ಹೇಳಿಕೆ ಕೊಟ್ಟು ಕೇಸಿನಿಂದ ಖುಲಾಸೆಗೊಂಡರು.

ಮಹಾರುದ್ರಪ್ಪ ಸಿರ್ಸೆ ಮತ್ತು ಜಗನ್ನಾಥರಾವ ನಾಯಿಕರವರು ಮಾತ್ರ "ಭಾಲ್ಕಿ ಅಂಚೆ ಕಚೇರಿಯ ಮೇಲೆ ನಾವೆ ತ್ರಿವರ್ಣ ಧ್ವಜ ಹಾರಿಸಿದ್ದೇವೆ. ನಮಗೆ ಸ್ವಾತಂತ್ರ್ಯಬೇಕು. ನಿಜಾಮನ ಅನೈತಿಕ ಸರಕಾರ ನಮಗೆ ಬೇಕಾಗಿಲ್ಲ" ಎದೆತಟ್ಟಿಕೊಂಡು ಹೇಳಿಕೆ ಕೊಟ್ಟರು. ಆಗ ನ್ಯಾಯಾಧೀಶರಾದ ಅರಬ್ ಗಣಪತರಾವ ದಿನಾಂಕ ೪ ಶಾಬಾನ್ ೧೩೫೭ ಫಸಲಿ ಪ್ರಕಾರ ಶಿಕ್ಷೆ ವಿಧಿಸಿದರು. ಅದಕ್ಕಾಗಿ ಮಹಾರುದ್ರಪ್ಪ ಸಿರ್ಸೆ ಮತ್ತು ಜಗನ್ನಾಥರಾವ ನಾಯಿಕರವರು ಮೂರು ತಿಂಗಳು ಎರಡು ದಿವಸ ಜೈಲಿನಲ್ಲಿ ಉಳಿದು ಹೊರಬಂದರು.

**೬. ರೇಲ್ವೆ ಸೇವೆಗೆ ಧಕ್ಕೆಯನ್ನುಂಟು ಮಾಡುವುದು:**

ಸರಕು ಸಾಗಾಣಿಕೆ, ಸೈನಿಕರ ಸುಗಮ ಮತ್ತು ಶೀಘ್ರ ಸಂಚಾರಕ್ಕೆ ಅನುಕೂಲವಾಗಲೆಂದು ನಿಜಾಂ ಸರ್ಕಾರವು ಹೈದರಾಬಾದನಿಂದ ಪರಳಿವರೆಗೆ ರೇಲ್ವೆ ಸೇವೆ ಒದಗಿಸಿತ್ತು. ಪರಳಿ ವೈಜಿನಾಥ ಹಿಂದುಗಳ ಆರಾಧ್ಯ ದೈವವೂ ಹೌದು. ಹಿಂದುಗಳ ಅನುಕಂಪ ಪಡೆದುಕೊಳ್ಳುವ ಉದ್ದೇಶವೂ ನಿಜಾಮನಿಗಿತ್ತು. ಅಂದುಕೊಂಡಂತೆ ಇದೆಲ್ಲವೂ ಸಹಜವಾಗಿಯೇ ನಡೆಯುತ್ತಿತ್ತು. ಯಾವಾಗ ಕಾಸಿಂ ರಜ್ವಿ ಮತ್ತು ಬಹಾದ್ದೂರ್ ಯಾರ್ ಜಂಗ್ ನೇತೃತ್ವದ ಪಡೆಗಳು ವಿಧ್ವಂಸಕಾರಿ ಚಟುವಟಿಕೆಗಳನ್ನು ಪ್ರಾರಂಭಿಸಿದ್ದರೋ, ಆಗ ಹೈದರಾಬಾದ–ಪರಳಿ ರೈಲು ಮಾರ್ಗವು ಹಿಂದುಗಳ ಪಾಲಿಗೆ ಮಾರಕವಾಗಿ ಪರಿಣಮಿಸಿತು. ಅಲ್ಲದೆ ಅಕ್ರಮ ಮುಸ್ಲಿಂ ವಲಸೆಗಾರರು ಸಹ ಇದೇ ರೈಲುಮಾರ್ಗವನ್ನು ಬಳಸಿಕೊಂಡು ನಿಜಾಂ ಪ್ರಾಂತ್ಯದಲ್ಲಿ ಆಶ್ರಿತರಾಗುತ್ತಿದ್ದರು. ಹೀಗೆ ಬಂದವರನ್ನು ಮಹಾಜರಿನ್ ಎಂದು ಕರೆಯುತ್ತಿದ್ದರು. ಇವರನ್ನು ಸೈನ್ಯ, ಪೊಲೀಸ್ ಇಲಾಖೆಗೆ ನಿಯೋಜಿಸಿಕೊಂಡು ಹಿಂದುಗಳ ಮೇಲೆ ದಬ್ಬಾಳಿಕೆ ಮಾಡಲು ಉಪಯೋಗಿಸಿ ಕೊಳ್ಳುತ್ತಿದ್ದರು. ಇದರ ವಿರುದ್ಧ ಹೋರಾಡುವುದು ಅನಿವಾರ್ಯವಾಯಿತು.

ರೈಲ್ವೆಹಳಿ ಕೀಳುವುದು, ಟೆಲಿಫೋನ್ ತಂತಿ ಕಡಿಯುವದು, ರಜಾಕಾರರ ಅತ್ಯಾಚಾರಕ್ಕೆ ಒಳಗಾದವರನ್ನು ರಕ್ಷಿಸುವುದು, ರಜಾಕಾರರನ್ನೆಲ್ಲ ಥಳಿಸುವುದು ಇತ್ಯಾದಿ ಅಟ್ಟರ್ಗಾ ಟೋಳಿ, ಕಿಸಾನ ದಳ ಮತ್ತು ಹಿಂದೂ ಟೋಳಿ ಕಾರ್ಯಕರ್ತರ ಪ್ರಮುಖ ಚಟುವಟಿಕೆಗಳಾಗಿದ್ದವು. ಜಾಯಗಾಂವ ಸಮೀಪ ರೈಲ್ವೆ ಫೋನಿನ ತಂತಿಯನ್ನು ಕತ್ತರಿಸಿ ರೈಲು ಸೇವೆಗೆ ಅಡ್ಡಿಯನ್ನುಂಟು ಮಾಡಿದ ಮಹಾರುದ್ರಪ್ಪ ಸಿರ್ಸೆಯವರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಯಿತು ಎಂದು ಮಹಾರುದ್ರಪ್ಪ ಅವರ ಹಿರಿಯ ಮಗಳಾದ ಡಾ. ಪ್ರೇಮಾ ಸಿರ್ಸೆಯವರು ಮಾಹಿತಿ ನೀಡಿದ್ದಾರೆ.



**೭. ನಾರಾಯಣರಾವ ಪವಾರ ಅವರಿಂದ ಬಾಂಬ್ ದಾಳಿ:**

ಹೈದರಾಬಾದ್ ಸಂಸ್ಥಾನದಲ್ಲಿ ಹಿಂದು ಜನರ ಮೇಲಾಗುತ್ತಿರುವ ದೌರ್ಜನ್ಯಗಳಿಗೆ ಇತಿಶ್ರೀ ಹಾಡಲು ಅಗತ್ಯವಾದ ಸಿದ್ಧತೆ ಮಾಡಿಕೊಳ್ಳುವ ದಿಶೆಯಲ್ಲಿ ಕ್ರಾಂತಿಕಾರಿ ನೇತಾರ ಪಂಡಿತ ನರೇಂದ್ರಜಿ ಮುಂದಾದರು. ತಮ್ಮ ಸ್ನೇಹಿತರಾದ ಸೊಲ್ಲಾಪುರ ನಿವಾಸಿ ಛನ್ನುಸಿಂಗ ಚಂದೆಲೆಯವರ ಜೊತೆ ಸೇರಿ ಸಾತಾರದ 'ಪತ್ರೆ ಸರಕಾರ್' ಎಂದೇ ಖ್ಯಾತರಾಗಿದ್ದ ಕ್ರಾಂತಿವೀರ ನಾನಾ ಪಾಟೀಲರನ್ನು ಭೇಟಿಯಾದರು. "ಜನತೆಯ ನೋವು ಯಾತನೆಗಳನ್ನು ಇಲ್ಲವಾಗಿಸಲು ಬೇಕಾಗುವ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡಲು ಮತ್ತು ಅದಕ್ಕಾಗಿ ಅಗತ್ಯ ನೆರವು ನೀಡಲು ನಾನು ಸಿದ್ಧನೆಂದು" ನಾನಾ ಪಾಟೀಲರು ಪಂಡಿತ ನರೇಂದ್ರಜಿಯವರಿಗೆ ಆಶ್ವಾಸನೆ ನೀಡಿದರು.

ಅದರ ಮೊದಲ ಘಟ್ಟವಾಗಿ ಪಂಡಿತ ನರೇಂದ್ರಜಿಯವರು ಜೋಳದಾಬಕಾದ ನಾರಾಯಣರಾವ ಪಂಡರಿನಾಥ ಪವಾರ ನೇತೃತ್ವದಲ್ಲಿ ಗನ್‌ಫೌಂಡ್ರಿ ವಿಶ್ವನಾಥ, ಎ. ಗಂಗಾರಾಮ, ಪಾಲಂಕೋಲ್ ಮೊಲಿಚನಾಥ ರೆಡ್ಡಿ, ಜಗದೀಶ, ಜಿ. ನಾರಾಯಣ ಸ್ವಾಮಿ, ಬಾಲಕಿಶನರಂತಹ ನವಯುವಕರನ್ನು ಸಾತಾರಕ್ಕೆ ಕಳುಹಿಸಿಕೊಟ್ಟರು. ಇವರೆಲ್ಲರು ಆರ್ಯ ಸಮಾಜದ ಅಗ್ರಮಾನ್ಯ ಸ್ವಯಂಸೇವಕರಾಗಿದ್ದರು. ನಿಜಾಮನ ಮೇಲೆ ಬಾಂಬ್ ದಾಳಿ ನಡೆಸಲು ಇವರೆಲ್ಲರಿಗೆ ನಾನಾ ಪಾಟೀಲ ಚೆನ್ನಾಗಿ ತರಬೇತಿ ನೀಡಿದರು. ಜೀವದ ಹಂಗು ತೊರೆದು ನಿಗದಿತ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಪ್ರತಿಜ್ಞಾವಿಧಿ ಬೋಧಿಸಿದರು.

ನಾರಾಯಣರಾವ ಪಂಡರಿನಾಥರಾವ ಪವಾರ ಮೂಲತಃ ಭಾಲ್ಕಿ ತಾಲೂಕಿನ ಜೋಳದಾಬಕಾ ಗ್ರಾಮದವರು. ತಂದೆ ಪಂಡರಿನಾಥರಾವ ರೇಲ್ವೆ ಇಲಾಖೆಯಲ್ಲಿ ಉದ್ಯೋಗಿ ಆಗಿರುವುದರಿಂದ ಅವರು ವಾರಂಗಲ್‌ನಲ್ಲಿ ನೆಲೆಸಿದ್ದರು. ಕಿಸಾನದಳದ ಮುಖ್ಯಕಾರ್ಯಕರ್ತರಾಗಿದ್ದರು. ಅಲ್ಲದೆ ಯಶವಂತರಾವ ಸಾಯಗಾಂವಕರ ಅವರ ಸಹೋದರ ಸಂಬಂಧಿಗಳಾಗಿದ್ದರು. ಆರ್ಥಿಕವಾಗಿ ಬಡವರಾಗಿದ್ದರೂ ತಮ್ಮ ಸರಳತೆ, ಸಜ್ಜನಿಕೆಯಿಂದಾಗಿ ಬಹುಜನರ ಪ್ರೀತಿಗೆ ಪಾತ್ರರಾಗಿದ್ದರು. ಪ್ರಾಥಮಿಕ ಹಂತದಲ್ಲಿ ಒಂದಿಷ್ಟು ವಿದ್ಯಾಭ್ಯಾಸ ಮಾಡಿದ್ದ ಅವರು ಸಂತ ತುಕಾರಾಮ, ಜ್ಞಾನೇಶ್ವರ, ಏಕನಾಥ, ಕಬೀರದಾಸ ಮೊದಲಾದವರ ಜೀವನ ಸಾಧನೆಗಳನ್ನು ಅರ್ಥ ಮಾಡಿಕೊಂಡಿದ್ದರು. ನೂರಾರು ಭಜನೆಗಳನ್ನು ಕಂಠಸ್ಥ ಮಾಡಿಕೊಂಡು ಸುಶ್ರಾವ್ಯವಾಗಿ ಹಾಡುತ್ತಿದ್ದರು. ದೈವಭಕ್ತಿ,

ಮಾನವಪ್ರೀತಿಯನ್ನು ರೂಢಿಸಿಕೊಂಡಷ್ಟೆ ಸ್ವಾತಂತ್ರ್ಯಶೀಲತೆಯನ್ನು ಕರಗತ ಮಾಡಿಕೊಂಡಿದ್ದರು. ಮುಖ್ಯವಾಗಿ ಅವರು ಉಗ್ರವಾದಿ ಸ್ವಾತಂತ್ರ್ಯ ಸೇನಾನಿಗಳಾಗಿದ್ದರು. 'ಕ್ರಾಂತಿವೀರ ನಾರಾಯಣ ಬಾಬು' ಎಂದು ಪ್ರಸಿದ್ಧರಾಗಿದ್ದರು. ಆಕ್ರಮಣಶೀಲ ಪ್ರವೃತ್ತಿ ಹೊಂದಿದ್ದರು. ಹೋರಾಟಗಾರರ ಗುಂಪಿನ ನೇತೃತ್ವವನ್ನು ಅವರು ಅತ್ಯಂತ ಉತ್ಸಾಹದಿಂದ ವಹಿಸಿಕೊಳ್ಳುತ್ತಿದ್ದರು. ಹಾಗಾಗಿಯೇ ಅವರನ್ನು ಮೀರ್ ಉಸ್ಮಾನ್ ಅಲಿಖಾನ್ ಮೇಲೆ ಬಾಂಬ್ ಹಾಕುವ ಜವಾಬ್ದಾರಿ ವಹಿಸಲಾಗಿತ್ತು ಎಂದು ಯಶವಂತರಾವ ಸಾಯಗಾಂವಕರ ಅಭಿಪ್ರಾಯಪಡುತ್ತಾರೆ.

'ಹೈದರಾಬಾದಿನ ಭಗತಸಿಂಗ್'ರೆಂದು ಪ್ರಖ್ಯಾತರಾದ ನಾರಾಯಣರಾವ ಪವಾರ ನಿರ್ದೇಶನದಂತೆ ಉಳಿದವರೆಲ್ಲರು ವೇಷ ಬದಲಾಯಿಸಿಕೊಂಡು ಹೈದರಾಬಾದ್ ತಲುಪಿದರು. ಸೊಲ್ಲಾಪುರದ ಕೊಂಡಾ ಲಕ್ಷ್ಮಣ ಅವರಿಂದ ಬಾಂಬುಗಳನ್ನು ಸಂಗ್ರಹಿಸಲು ಅನೇಕ ಉತ್ಸಾಹಿ ತರುಣರು ಮುಂದೆ ಬಂದರೂ ಪಂಡಿತ ನರೇಂದ್ರಜಿಯವರಿಗೆ ಮಾತ್ರ ಆ ಜವಾಬ್ದಾರಿ ನೀಡಲಾಯಿತು. ಛನ್ನುಸಿಂಗ್ ಚಂದೆಲೆಯವರ ಸಂಬಂಧಿಕರೊಬ್ಬರು ಗೂಡ್ಸ್ ಟ್ರೇನ್ ಗಾರ್ಡ್ ಆಗಿದ್ದರು. ವಾರಕ್ಕೊಮ್ಮೆ ಆ ಗೂಡ್ಸ್ ಟ್ರೇನ್ ಸೊಲ್ಲಾಪುರದಿಂದ ಹೊರಟು ಹೈದರಾಬಾದ ತಲುಪುತ್ತಿತ್ತು. ಪಂಡಿತ ನರೇಂದ್ರಜಿಯವರು ಮೊದಲಿಗೆ ವೇಷ ಬದಲಿಸಿಕೊಂಡರು. ತಮ್ಮ ಜೊತೆಯಲ್ಲಿದ್ದ ಒಬ್ಬ ಆಪ್ತಸಹಾಯಕನ ಮೂಲಕ ಬಹಳಷ್ಟು ಧೈರ್ಯದಿಂದ ಎಲ್ಲ ಬಾಂಬ್ ಸಾಮಗ್ರಿಗಳನ್ನು ಹೈದರಾಬಾದ್‌ನಲ್ಲಿರುವ 'ಹೆಲ್ತ್‌ಲೀಗ್' ಕಾರ್ಯಾಲಯಕ್ಕೆ ತಲುಪಿಸಿದರು. ನಾರಾಯಣರಾವ ಪವಾರ ಮುಖಂಡತ್ವದ ಆ ಎಲ್ಲ ಕ್ರಾಂತಿವೀರರು ಶಂಕರರಾವ ಕುಲಕರ್ಣಿಯವರ ಮನೆಯಲ್ಲಿ ಸಭೆ ಸೇರಿ ನಿಜಾಮನ ಮೇಲೆ ಬಾಂಬ್ ದಾಳಿ ನಡೆಸುವ ನಿರ್ಣಯ ಕೈಗೊಂಡರು. "ಒಂದು ಪ್ರತಿಜ್ಞಾಪತ್ರದಲ್ಲಿ ಎಲ್ಲರೂ ಹಿಂದು ಸಮಾಜದ ರಕ್ಷಣೆಗಾಗಿ ತ್ಯಾಗ–ಬಲಿದಾನ ಮಾಡಬೇಕು ಎಂದು ಉಲ್ಲೇಖಿಸಲಾಗಿತ್ತು. ಸಭೆಯಲ್ಲಿ ಗಂಗಾರಾಮ್, ಜಗದೀಶ್, ನಾರಾಯಾಣರಾವ ಪವಾರ್ ಮತ್ತು ಪಂಡಿತ ವಿಶ್ವನಾಥ ತಮ್ಮ ಬೆರಳಿನ ರಕ್ತದಿಂದ ಪ್ರತಿಜ್ಞಾಪತ್ರದಲ್ಲಿ ಹಸ್ತಾಕ್ಷರ ಮಾಡಿದರು. ಯೋಜನೆಗೆ ಅನುಸಾರವಾಗಿ ಎಲ್ಲರೂ ಬಾಂಬ್ ಮತ್ತು ಪಿಸ್ತೂಲುಗಳನ್ನು ಹಂಚಿಕೊಂಡು ನಿಗದಿತ ಸ್ಥಳದಲ್ಲಿ ನಿಜಾಮನ ಮೇಲೆ ಬಾಂಬ್ ಸಿಡಿಸಲು ಹೊಂಚುಹಾಕಿ ಕುಳಿತರು" (ಗೋಪಾಲರಾವ ಹೇಜೀಬ್, ಹೈದರಾಬಾದ್ ಮುಕ್ತಿ ಸಂಘರ್ಷ, ಪು–೧೬೪) ಒಂದು ಬಾಂಬ್ ಸ್ಫೋಟಿಸುವುದರಲ್ಲಿ ವಿಫಲರಾದರೆ ಆತ್ಮಹತ್ಯೆ ಮಾಡಿಕೊಳ್ಳಬೇಕೆ ವಿನಃ ಪೊಲೀಸರ ಕೈಗೆ ಸಿಗಬಾರದು, ಎಷ್ಟೇ ಚಿತ್ರಹಿಂಸೆ ನೀಡಿದಾಗಲೂ ಬಾಯಿ ಬಿಡಬಾರದೆಂದು ನಿಶ್ಚಯಿಸಿದ್ದರು. ಆತ್ಮಹತ್ಯೆಗಾಗಿ ಬೇಕಾದ ವಿಷದ ಬಾಟಲಿಯನ್ನು ಎಲ್ಲರು ತಮ್ಮ ತಮ್ಮ ಜೊತೆಯಲ್ಲಿ ಇಟ್ಟುಕೊಂಡಿದ್ದರು.



ನಿಜಾಮನ ಚಲನವಲನದ ಮೇಲೆ ಮೊದಲಿಗೆ ನಿಗಾ ಇರಿಸಿದ್ದರು. ಪ್ರತಿದಿನ ಆತ ಕಿಂಗ್‌ಕೋಠಿ (ನಿಜಾಂ ನಿವಾಸ)ಯಿಂದ ಹೊರಟು ಹಳೆ ಹೈದರಾಬಾದ್‌ಸ್ಥಿತ ತಾಯಿಯ ಸಮಾಧಿಗೆ ಭೇಟಿ ಕೊಡುತ್ತಾನೆಂಬ ಮಾಹಿತಿ ಸಂಗ್ರಹಿಸಿದರು. ಕಿಂಗ್‌ಕೋಠಿ ಮೂಲೆಯಲ್ಲಿರುವ 'ಗುಂಟಿ ಆ್ಯಂಡ್ ಕಂಪನಿ' ಎದುರು ನಿಜಾಂ ಬಂದಾಗ ಬಾಂಬ್ ದಾಳಿ ಮಾಡಲು ನಿಶ್ಚಯಿಸಲಾಯಿತು. ನಾರಾಯಣರಾವ ಪವಾರ್‌ನಿಂದಲೇ ಮೊದಲ ಬಾಂಬ್ ದಾಳಿ ನಡೆಸುವುದು, ಅವರಿಗೆ ಸಹಾಯಕರಾಗಿ ಇತರರು ಎಂದು ಗೊತ್ತು ಮಾಡಲಾಯಿತು. ಕಿಂಗ್‌ಕೋಠಿಯಲ್ಲಿ ನಾರಾಯಣರಾವ ಪವಾರ್, ಬೇಗುಲ್‌ಗುಂಟಾ ಮಾರ್ಗದಲ್ಲಿ ಜಗದೀಶ್ ಮತ್ತು ಮೆಥೋಡಿಸ್ಟ್ ಸ್ಕೂಲ್ ಮಾರ್ಗದಲ್ಲಿ ಗಂಗಾರಾಮ್ ನಿಜಾಮನ ಆಗಮನದ ನಿರೀಕ್ಷೆಯಲ್ಲಿದ್ದರು. ಪವಾರ್‌ನಿಂದ ಸಾಧ್ಯವಾಗದಿದ್ದಲ್ಲಿ ಮುಂದಿನವರು ಬಾಂಬ್‌ದಾಳಿಯನ್ನು ಪೂರ್ಣಗೊಳಿಸಲು ಯೋಜಿಸಲಾಗಿತ್ತು. "೦೪–೧೨–೧೯೪೭ರಂದು ಸಾಯಂಕಾಲ ೪.೩೦ ಗಂಟೆಗೆ ನಿಜಾಮನ ಸವಾರಿ ಕಿಂಗ್‌ಕೋಠಿಯಿಂದ ಹೊರಟಿತು. ೫ ಗಂಟೆಯ ಸುಮಾರಿಗೆ ನಿಜಾಮನ ಕಾರು ಆಲ್ ಸೇಂಟ್ಸ್ ತಿರುವಿನಲ್ಲಿ ಬಂದಿತು. ಅಲ್ಲಿ ಶೇಖ್ ಹುಸೇನ್ ಎಂಬ ಕಾನ್‌ಸ್ಟೇಬಲ್ ನಿಂತಿದ್ದ. ಹಿಂಭಾಗದಲ್ಲಿ ನಾರಾಯಣರಾವ ಪವಾರ ನಿಂತಿದ್ದರು. ಅವರು ಸ್ವಲ್ಪ ಮುಂದೆ ಬಂದು ನಿಜಾಮನ ಕಾರಿನ ಮೇಲೆ ಬಾಂಬ್ ಎಸೆದರು. ಬಾಂಬ್ ಕಾರಿನೊಳಗೆ ಬೀಳದೆ ಅದಕ್ಕೆ ತಗುಲಿಕೊಂಡು ಉರುಳುತ್ತ ಮಾರ್ಗದಲ್ಲಿ ಸ್ಫೋಟಿಸಿತು. ಭಾರಿ ಸಪ್ಪಳವಾಗಿ, ದಟ್ಟವಾದ ಹೊಗೆ ಎಲ್ಲಾ ಕಡೆ ಆವರಿಸಿ ಜನರು ಚಲ್ಲಾಪಿಲ್ಲಿಯಾಗಿ ಓಡಿದರು. ದಾರಿಯಲ್ಲಿ ನಿಂತ ಕೆಲವರಿಗೆ ಬಾಂಬಿನ ಚೂರುಗಳು ತಗುಲಿ ಅಲ್ಪ ಸ್ವಲ್ಪ ಗಾಯಗಳಾದವು. ನಿಜಾಮನ ಕಾರ್ ಚಾಲಕ ಶೇಖ್ ಮೆಹಬೂಬ್ ಕಾರನ್ನು ನಿಲ್ಲಿಸಿ ಅದನ್ನು ವೇಗವಾಗಿ ಹಿಂದುಗಡೆ ತೆಗೆದುಕೊಂಡನು. ಅಷ್ಟರಲ್ಲಿ ಶೇಖ್ ಹುಸೇನ್ ಕಾನ್‌ಸ್ಟೇಟಲ್ 'ಮಾರೋ! ಪಕಡೋ!' ಎಂದು ಕೂಗುತ್ತ ನಾರಾಯಣರಾವ ಪವಾರರ ಬೆನ್ನಟ್ಟಿದ. ಅವನಿಗೆ ಸಹಾಯಕರಾಗಿ ಇನ್ನುಳಿದ ಅಂಗರಕ್ಷಕರು, ಪೊಲೀಸರು ನಾರಾಯಣರಾವ ಪವಾರರನ್ನು ಹಿಡಿದರು. ಎಲ್ಲರು ಕೂಡಿಯೇ ನಾರಾಯಣರಾವಗೆ ಥಳಿಸುತ್ತಿದ್ದರು.

ಟ್ರಾಫಿಕ್ ಇನ್ಸ್‌ಪೆಕ್ಟರ್ ಜೋಸೆಫ್ ಪವಾರರನ್ನು ದಾಳಿಕೋರರಿಂದ ರಕ್ಷಿಸಿ ಅವರನ್ನು ಕಿಂಗ್‌ಕೋಠಿಯ ಪೋಲೀಸ್ ಸ್ಟೇಶನ್ನಿಗೆ ಕರೆದುಕೊಂಡು ಹೋದ. ಅಲ್ಲಿ ಪವಾರ್ ಪೋಲೀಸರಿಗೆ ಯಾವ ಮಾಹಿತಿಯನ್ನೂ ಕೊಡಲು ನಿರಾಕರಿಸಿದರು. ತಮ್ಮ ಸಂಗಾತಿಗಳು ಆದಷ್ಟು ಬೇಗ ರಾಜ್ಯದಿಂದ ಹೊರಗಡೆ ಹೋಗಬೇಕೆಂಬುದೇ ಅವರ ಇಚ್ಛೆಯಾಗಿತ್ತು. ಪವಾರರಿಗೆ ಪೋಲೀಸರು ಚಿತ್ರಹಿಂಸೆ ಕೊಟ್ಟರು. ಅಶ್ಲೀಲ ಬೈಗಳನ್ನೂ ಬಯ್ಯುವದು, ಮುಖದ ಮೇಲೆ ಉಗುಳುವುದು, ಒದೆಯುವುದು ಮತ್ತು ಪಾದರಕ್ಷೆಗಳಿಂದ ಹೊಡೆಯುವುದು ನಿರಂತರ ನಡೆದೇ ಇತ್ತು. ಈ ಹೊಡೆತಗಳಿಂದ ಪವಾರ್ ಅಪಾರ ನೋವಿಗೀಡಾಗಿದ್ದರು. ಬಾಯಾರಿಕೆಯಾಗಿ ಪವಾರ್ ಕುಡಿಯಲು ನೀರು ಕೇಳಿದರು. ಆದರೆ ಪೋಲೀಸರು ಇವರಿಗೆ ಮೂತ್ರಪಾನ ಮಾಡಿಸಬೇಕೆಂದು ಹೇಳುತ್ತಿದ್ದರು" ಎಂದು ಗೋಪಾಲರಾವ ಹೇಜೀಬ್‌ರವರು ಆ ದಿನದ ನೈಜ ಘಟನೆಯನ್ನು ದಾಖಲಿಸಿದ್ದಾರೆ. (ಹೈದರಾಬಾದ್ ಮುಕ್ತಿ ಸಂಘರ್ಷ, ಪು–೧೬೫)

"ತಲೆಕೆಟ್ಟ ತರುಣನೋರ್ವನು ನಿಜಾಮರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ಕೈಬಾಂಬ್‌ನ್ನು ಎಸೆದನು. ಅದು ಕಾರಿನ ಬಾಗಿಲಿಗೆ ಬಡಿದು, ಅನತಿ ದೂರದಲ್ಲಿ ಸ್ಫೋಟಗೊಂಡಿತು. ಅಲ್ಲಾಹುವಿನ ಕೃಪೆಯಿಂದ ನಿಜಾಮರು ಕೂದಲೂ ಕೊಂಕದಂತೆ ಅಪಾಯದಿಂದ ಪಾರಾಗಿ ಬದುಕುಳಿದ್ದಾರೆ" (ಹೈದರಾಬಾದ್ ವಿಮೋಚನೆಯ ವೀರಗಾಥೆ ಪುಟ–೧೨) ಎಂಬ ಸುದ್ದಿಯನ್ನು ೧೯೪೭ರ ಡಿಸೆಂಬರ್ ೪ರ ರಾತ್ರಿ ೮ ಗಂಟೆಗೆ ಹೈದರಾಬಾದ ಆಕಾಶ ವಾಣಿಯಿಂದ ಪ್ರಸಾರವಾಗಿತ್ತು.

ನಿಜಾಮ ಸಂಸ್ಥಾನದ ಪ್ರಧಾನಮಂತ್ರಿ ಲಾಯಕ್ ಅಲಿ, ಪೋಲೀಸ್ ಅಸಿಸ್ಟೆಂಟ್ ಕಮೀಶನರ್ ಫಜಲ್ ರಸೂಲ್ ಖಾನರು ಈ ಬಗ್ಗೆ ವಿಚಾರಣೆ ನಡೆಸಿದರು. ನಾರಾಯಣರಾವ ಪವಾರರಿಂದ ಎಲ್ಲ ಮಗ್ಗಲುಗಳಿಂದ ಮಾಹಿತಿ ಪಡೆದುಕೊಳ್ಳಲು ಪ್ರಯತ್ನಿಸಿದರು. ಕೊನೆಗೆ ಸಾಮ, ದಂಡಾದಿ ಪ್ರಯೋಗವನ್ನು ಮಾಡಿದರು. ನಾರಾಯಣರಾವ ಕುಡಿಯಲು ನೀರು ಕೇಳಿದರೆ ಅವರು ಒತ್ತಾಯಪೂರ್ವಕವಾಗಿ ಮೂತ್ರ ಕುಡಿಸುತ್ತಿದ್ದರು. ಮೂರು ದಿನಗಳ ಕಾಲ ನನ್ನ ತಮ್ಮನ ಕೈಗಳೆರಡನ್ನೂ ಮೇಲೆತ್ತಿ ಕಟ್ಟಿ ಮೊಣಕೈ ಮೊಣಕಾಲುಗಳ ಮೇಲೆ ಪಠಾಣರು ಲಾಠಿ ಪ್ರಹಾರ ಮಾಡುತ್ತಿದ್ದರು. ಆ ಎಲ್ಲ ನೋವು ಸಹಿಸುತ್ತ ದೇಶಪ್ರೇಮ ಮೆರೆದರು. ಪವಾರ ಯಾವ ಸುಳಿವು ಬಿಟ್ಟುಕೊಡಲಿಲ್ಲ. ಮೈಚರ್ಮ



ಕಿತ್ತು ರಕ್ತ ಚಿಮ್ಮುತ್ತಿದ್ದರೂ ಬಾಯಿ ಬಿಡಲಿಲ್ಲ ಎಂದು ಅವರ ಸೋದರಸಂಬಂಧಿ ಯಶವಂತರಾವ ಸಾಯಗಾಂವಕರ ತಿಳಿಸಿದ್ದಾರೆ.

ಅಕಸ್ಮಾತ್ ಪವಾರರ ಬಾಂಬ್ ದಾಳಿಯಿಂದ ತಪ್ಪಿಸಿಕೊಂಡರೂ ಬೇಗುಲ್‌ಗುಂಟಾ ಮಾರ್ಗದಲ್ಲಿದ್ದ ಜಗದೀಶ್, ಅದಕ್ಕೂ ಮುಂದೆ ನಿಂತಿದ್ದ ಗಂಗಾರಾಮ್ ಮತ್ತು ಬಾಲಕಿಶನ ಈ ಅವಧಿಯಲ್ಲಿ ತಪ್ಪಿಸಿಕೊಂಡರು. ಕಾಚಿಗೂಡಾ ರೈಲ್ವೆ ನಿಲ್ದಾಣದಲ್ಲಿ ಸಿಕ್ಕ ಗಂಗಾರಾಮನ ಸೈಕಲ್ ಮೇಲಿದ್ದ ಹೆಸರಿನ ಜಾಡನ್ನು ಹಿಡಿದು ಆತನ ಊರಾದ ಪಾಲಮಾಕೋಲ್‌ದಲ್ಲಿ ಬಂಧಿಸಿದರು. ಜೈಲಿನಲ್ಲಿದ್ದರೂ ಅವರಿಬ್ಬರು ಸುಮ್ಮನೆ ಕೂಡಲಿಲ್ಲ. ರಾಜಕೀಯ ಕೈದಿಗಳೆಂದು ಪರಿಗಣಿಸುವಂತೆ ಸತ್ಯಾಗ್ರಹ ಮಾಡಿದರು. ಆದರೆ ಸರ್ಕಾರವು ಅವರ ಮನವಿಗೆ ಸ್ಪಂದಿಸಲಿಲ್ಲ. ಇವರೂ ತಮ್ಮ ಛಲವನ್ನು ಬಿಡಲಿಲ್ಲ. ಉಪವಾಸ ಸತ್ಯಾಗ್ರಹ ಕುಳಿತರು. ಒಂದಲ್ಲ ಹದಿನೈದು ದಿನಗಳು ಕಳೆದವು. ನಿಶ್ಶಕ್ತಿಯಿಂದಾಗಿ ಮೂರ್ಛೆಗೊಂಡರು. ಚಿಂತಾಜನಕ ಸ್ಥಿತಿಗೆ ತಲುಪಿದರು. ಆಗ ಜೈಲಿಗೆ ಭೇಟಿ ನೀಡಿದ ಡಾ. ಮೇಲ್ಕೋಟೆಯವರು ಇವರ ಹಠಮಾರಿ ಧೋರಣೆ ಮತ್ತು ಮನವಿಗೆ ಸ್ಪಂದಿಸಿ ಸರ್ಕಾರದಿಂದ ರಾಜಕೀಯ ಕೈದಿಗಳೆಂದು ಪರಿಗಣಿಸುವಂತೆ ಮಾಡಿದರು. ಕ್ರಾಂತಿಕಾರರಿಗೆ ಭಗವಂತ ಸಹಾಯ ಮಾಡಲೆಂದು ಪ್ರಾರ್ಥಿಸುತ್ತಿದ್ದರು. ಈ ಕೇಸಿನ ಇನ್ನಿತರ ಆರೋಪಿಗಳಾದ ಶ್ರೀ ಬಾಲಕೃಷ್ಣನಾಗಲೀ, ಜಗದೀಶನಾಗಲೀ ಪೊಲೀಸರ ಕೈಗೆ ಸಿಗಲಿಲ್ಲ.

ಹೈದರಾಬಾದ್ ಸೆಶನ್ಸ್ ಕೋರ್ಟ್ ನ್ಯಾಯಾಧೀಶರಾಗಿದ್ದ ಮುರ್ತುಜಾ ಅಲೀಖಾನ್ ಸಮ್ಮುಖದಲ್ಲಿ ವಿಚಾರಣೆ ನಡೆಯಿತು. ದೇಶದ ಹಿತದೃಷ್ಟಿಯಿಂದ ನಿಜಾಮನನ್ನು ಕೊಲೆ ಮಾಡಲು ಉದ್ದೇಶಿಸಲಾಗಿತ್ತೆಂದು ನಾರಾಯಣರಾವ ಪವಾರ್, ಗಂಗಾರಾಮ ಒಪ್ಪಿಕೊಂಡರು. ಅವರಿಬ್ಬರ ಹೇಳಿಕೆಯನ್ನು ಪಡೆದು ಸ್ಥಳೀಯ ನ್ಯಾಯಾಲಯವು ನಾರಾಯಣರಾವಗೆ ಗಲ್ಲುಶಿಕ್ಷೆ, ಗಂಗಾರಾಮನಿಗೆ ಆಜನ್ಮ ಕಾರಾವಾಸ ಶಿಕ್ಷೆ ವಿಧಿಸಿತು. ಇವರಿಬ್ಬರೂ ಹಸನ್ಮುಖಿಗಳಾಗಿ ಭಾರತಮಾತೆಯ ಜಯಘೋಷ ಮಾಡುತ್ತ ನ್ಯಾಯಾಲಯದ ತೀರ್ಪನ್ನು ಸ್ವಾಗತಿಸಿದರು. ನ್ಯಾಯಿಕ ಸಮಿತಿಯ ನಿರ್ಣಯವನ್ನು ಮನ್ನಿಸಿದ ನಿಜಾಮ್ ಸರ್ಕಾರವು ೨೮.೦೯.೧೯೪೮ರಂದು ಗಲ್ಲುಶಿಕ್ಷೆ ನೀಡಲು ಆದೇಶ ನೀಡಿತು.

ನಾರಾಯಣರಾವ ಪವಾರ್ ನಿಜಾಮನ ಬಗ್ಗೆ ಕೋರ್ಟ್‌ನಲ್ಲಿ ಕೊಟ್ಟ ಹೇಳಿಕೆ ಹೀಗಿತ್ತು. "ನಿಜಾಮನು ಭಾರತದ ದೊಡ್ಡ ದ್ರೋಹಿಯಾಗಿದ್ದಾನೆ. ತನ್ನ ದೇಶಬಾಂಧವರೊಂದಿಗೆ ಜೀವಿಸುವ ಬದಲಾಗಿ ಆತ ಲಂಡನ್ ಮತ್ತು ಕರಾಚಿ

ನಗರಗಳೊಂದಿಗೆ ಸಂಬಂಧವಿಟ್ಟುಕೊಂಡು ಇಲ್ಲಿ ಇಸ್ಲಾಮೀ ಆಸಫಿಯಾ ರಾಜ್ಯವನ್ನು ಸ್ಥಿರಗೊಳಿಸುವ ಕನಸು ಕಾಣುತ್ತಿದ್ದಾನೆ. ನಿಜಾಮನು ಭಾರತ ಒಕ್ಕೂಟದೊಂದಿಗೆ ವಿಲೀನವಾಗಿ ಜವಾಬ್ದಾರಿಯುತ ಆಡಳಿತವನ್ನು ಸ್ಥಾಪಿಸಬೇಕೆಂಬ ಜನರ ಬೇಡಿಕೆಗಳನ್ನು ನಿರಾಕರಿಸಿದ್ದಾನೆ. ತನ್ನ ಉದ್ದೇಶದ ಈಡೇರಿಕೆಗಾಗಿ ನಿಜಾಮನು ಇತ್ತೆಹಾದುಲ್ ಮುಸಲ್ಮೀನ್ ಎಂಬ ಕೋಮುವಾದಿ ಸಂಘಟನೆಯೊಂದಿಗೆ ಮತ್ತು ರಜಾಕಾರರೊಂದಿಗೆ ಸೇರಿಕೊಂಡು ಹಿಂದುಗಳ ಧರ್ಮ ಪರಿವರ್ತನೆಗಾಗಿ ಆ ಸಂಘಟನೆಗಳಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾನೆ. ಹೊರಗಿನಿಂದ ಹನ್ನೆರಡು ಲಕ್ಷ ಮುಸಲ್ಮಾನ ಗೂಂಡಾಗಳನ್ನು ಕರೆಯಿಸಿಕೊಂಡು ಇಲ್ಲಿನ ಹಿಂದುಗಳನ್ನು ಹೊರಗಟ್ಟುವ ಪಿತೂರಿಯನ್ನೂ ನಿಜಾಮ ಮಾಡಿದ್ದಾನೆ. ಹಿಂದುಗಳ ಮನೆಗಳನ್ನು ಲೂಟಿ ಮಾಡಿ ಅವುಗಳಿಗೆ ಬೆಂಕಿ ಹಚ್ಚಲಾಗುತ್ತಿದೆ. ಮಹಿಳೆಯರ ಮೇಲೆ ಅತ್ಯಾಚಾರವೆಸಗಲಾಗುತ್ತಿದೆ. ಈ ಎಲ್ಲ ರಾಕ್ಷಸೀಕೃತ್ಯಗಳಿಗೆ ನಿಜಾಮನೇ ಕಾರಣ. ನಿಜಾಮನನ್ನು ಮುಗಿಸಿಬಿಡುವ ಉದ್ದೇಶದಿಂದ ದಿನಾಂಕ ೦೪.೧೨. ೧೯೪೭ರಂದು ನಾನು ಆತನ ಮೇಲೆ ಬಾಂಬ್ ಎಸೆದೆ" (ಗೋಪಾಲರಾವ ಹೇಜೀಬ್, ಹೈದರಾಬಾದ ಮುಕ್ತಿ ಸಂಘರ್ಷ. ಪು–೧೬೬)

ಇವರಿಬ್ಬರ ಪರವಾಗಿ ಬ್ಯಾರಿಸ್ಟರ್ ರಾಮಲಾಲ್ ಕಿಶನ್ ನ್ಯಾಯಾಲಯದಲ್ಲಿ ವಾದಿಸಿದ್ದರು. ಕಕ್ಷಿದಾರರನ್ನು ನೇಣುಗಂಬದಿಂದ ಬಚಾವ್ ಮಾಡಲು ಲೇವಿವಿರೋಧಿ ಬಾಂಬ್ ದಾಳಿ ಇದಾಗಿತ್ತೆಂದು ಹೇಳಿಕೆ ನೀಡಲು ನ್ಯಾಯವಾದಿ ಸಲಹೆ ಮಾಡಿದರು. ಅದರ ವಿವರಣೆಯನ್ನು ನೀಡಿದ್ದರು. ಆದರೆ ನಾರಾಯಣರಾವ, ಗಂಗಾರಾಮ ತಮ್ಮ ವಕೀಲರು ನೀಡಿದ ಸಲಹೆಯನ್ನು ಒಪ್ಪಲಿಲ್ಲ. ಸತ್ಯವನ್ನು ಸುಳ್ಳನ್ನಾಗಿಸುವ ಹಾಗೂ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳುವ ಹುನ್ನಾರವನ್ನು ಮಾನ್ಯ ಮಾಡದ ನೈಜ ದೇಶಭಕ್ತರಾಗಿದ್ದರು.

ನಿಜಾಂ ಸರ್ಕಾರವು ರೈತರಿಂದ ಬಲಾತ್ಕಾರವಾಗಿ ಲೇವಿ ವಸೂಲಿ ಮಾಡುತ್ತಿತ್ತು. ಲೇವಿ ಎಂದರೆ ಸರ್ಕಾರ ನಿಗದಿಪಡಿಸಿದ ದರದಲ್ಲೇ ರೈತರಿಂದ ಧಾನ್ಯ ವಸೂಲಿ ಮಾಡುವ ಕ್ರಮ. ಈ ಕ್ರಮ ರೈತರ ಪರವಾಗಿರಲಿಲ್ಲ. ಧಾನ್ಯ ಮಾರಾಟ ಮಾಡಲು ರೈತರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರಲಿಲ್ಲ. ತಮ್ಮ ಸ್ವಂತ ಜಮೀನಿನಲ್ಲಿ ಬಿತ್ತಿ ಬೆಳೆದ ಧಾನ್ಯಗಳನ್ನು ನಿಜಾಂ ಅಧಿಕಾರಿಗಳ ಮರ್ಜಿಯಂತೆ ಮಾರಾಟ ಮಾಡಬೇಕಾಗುತ್ತಿತ್ತು. ನಿಜಾಂ ಸರ್ಕಾರವು ನೀಡಿದ ಹಣಕ್ಕೆ ಪ್ರತಿಯಾಗಿ ಅವರು ಕೇಳಿದಷ್ಟು ಪ್ರಮಾಣದಲ್ಲಿ ಧಾನ್ಯಗಳ ಮೂಟೆಗಳ್ಳು ಅವರು ಗುರುತಿಸಿದ ಸ್ಥಳಕ್ಕೆ ಸಾಗಿಸಬೇಕಾಗಿತ್ತು. ಇದೊಂದು ರೀತಿಯಲ್ಲಿ



ಜನವಿರೋಧಿ ಕ್ರಮವಾಗಿತ್ತು. ಲೇವಿ ವಿರೋಧಿಸಲು ತಾವು ನಿಜಾಂನ ಮೇಲೆ ಬಾಂಬ್ ಹಾಕಬೇಕಾಯಿತೆಂಬ ಹೇಳಿಕೆಗೆ ಇವರು ಬದ್ಧರಾಗಿದ್ದರೆ ಚೆನ್ನಾಗಿರುತ್ತಿತ್ತು. ನ್ಯಾಯಾಲಯ ಅವರಿಗೆ ಕಠಿಣ ಶಿಕ್ಷೆ ನೀಡುತ್ತಿರಲಿಲ್ಲವೇನೋ? ರಾಮಲಾಲ್ ಕಿಶನ್‌ರ ರಕ್ಷಣಾತ್ಮಕ ಕಾನೂನು ಸಲಹೆಗೆ ನಾರಾಯಣರಾವ ಪವಾರ್ ಒಪ್ಪಲಿಲ್ಲ. ನಿಜಾಮನನ್ನು ಮುಗಿಸಿಬಿಡುವ ಉದ್ದೇಶದಿಂದ ಬಾಂಬ್ ಎಸೆಯಲಾಯಿತು. ನನ್ನ ಹೇಳಿಕೆ ಸತ್ಯವಾಗಿದೆ ಎಂದು ನಾರಾಯಣರಾವ ಪವಾರ್ ಕೋರ್ಟಿಗೆ ತಿಳಿಸಿದರು. ಇದನ್ನು ಪರಿಗಣಿಸಿದ ನ್ಯಾಯಾಲಯವು ಪವಾರರಿಗೆ ಮರಣ ದಂಡನೆ ಶಿಕ್ಷೆ, ಗಂಗಾರಾಮನಿಗೆ ಆಜನ್ಮ ಕಾರಾಗೃಹವಾಸ ಶಿಕ್ಷೆ ವಿಧಿಸಿತು.

ನಿಜಾಂ ಪ್ರಭುತ್ವ ಕೊನೆಗೊಂಡ ಮೇಲೆ ಅಂದರೆ ೧೯೪೮ರ ಸಪ್ಟೆಂಬರ್ ೧೭ರ ರಾತ್ರಿ ೮–೪೫ ನಿಮಿಷಕ್ಕೆ ಮಿಲಿಟರಿ ಗೌವರ್ನರ್ ಜೆ. ಎನ್. ಚೌಧರಿಯವರ ಆದೇಶದಂತೆ 'ಆಲ್ ಇಂಡಿಯಾ' ರೇಡಿಯೋ ಮೂಲಕ ನಾರಾಯಣರಾವ ಪವಾರ್‌ಗೆ ವಿಧಿಸಲಾಗಿದ್ದ ಗಲ್ಲುಶಿಕ್ಷೆ ರದ್ದುಗೊಳಿಸಿ, ಆಜನ್ಮ ಕಾರಾಗೃಹವಾಸ ಶಿಕ್ಷೆಯಾಗಿ ಪರಿವರ್ತಿಸಲಾಗಿದೆ ಎಂದು ದೇವಕಿನಂದನ ಪಾಂಡೆ ಘೋಷಿಸಿದರೆಂದು ಯಶವಂತರಾವ ಸಾಯಂಗಾವಕರ ತಮ್ಮ 'ಹೈದರಾಬಾದ ಮುಕ್ತಿ ಆಂದೋಲನಕೆ ಕುಛ್ ಅಧ್ಯಾಯ'ದಲ್ಲಿ ಉಲ್ಲೇಖಿಸಿದ್ದಾರೆ.

ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಹೈದರಾಬಾದ್ ವಿಮೋಚನೆಯಾದ ಮೇಲೆ ಆಂಧ್ರಪ್ರದೇಶ ಕಾಂಗ್ರೆಸ್‌ನ ಕಾರ್ಯದರ್ಶಿ ಜಿ. ನಾರಾಯಣ ಸ್ವಾಮಿಯವರ ಶಿಫಾರಿಸ್ಸಿನಂತೆ ಪಂಡಿತ ನರೇಂದ್ರಜೀ, ಹಯಗ್ರೀವಾಚಾರ್ಯ ಸೇರಿದಂತೆ ಆರ್ಯ ಸಮಾಜದ ಹಲವಾರು ಕಾರ್ಯಕರ್ತರು ಜೈಲಿನಿಂದ ಬಿಡುಗಡೆಗೊಂಡರು. ಸ್ವಾತಂತ್ರ್ಯ ಯೋಧರ ವಿರುದ್ಧವಿದ್ದ ಬಂಧನದ ಆಜ್ಞೆಗಳು ರದ್ದಾದವು. ಆದರೆ ನಾರಾಯಣರಾವ ಪವಾರ್ ಮತ್ತು ಗಂಗಾರಾಮನನ್ನು ಜೈಲಿನಿಂದ ಮುಕ್ತಗೊಳಿಸುವ ಪ್ರಯತ್ನಕ್ಕೆ ಕಾಂಗ್ರೆಸ್ ಅಥವಾ ಆರ್ಯ ಸಮಾಜದ ಕಾರ್ಯಕರ್ತರು ಮುಂದಾಗಲಿಲ್ಲ. "ಕೊನೆಗೆ ನಾರಾಯಣರಾವ ಪವಾರರ ತಂದೆಯಾದ ಪಂಢರಿನಾಥ ಪವಾರ್‌ರವರು ಸರ್ದಾರ್ ಪಟೇಲರನ್ನು ಕಂಡು– "ನೀವೆಲ್ಲರೂ ಸ್ವತಂತ್ರವಾಗಿ ರಾಜ್ಯಭಾರ ಮಾಡುತ್ತಿದ್ದೀರಿ. ಆದರೆ ನನ್ನ ಮಗ ಹಾಗೂ ಆತನ ಸ್ನೇಹಿತ ಇನ್ನೂ ಜೈಲಿನಲ್ಲಿ ಏಕೆ ಬಂಧಿಗಳಾಗಿದ್ದಾರೆ?" ಎಂದು ಕೇಳಿದರು. ಅವರ ಧ್ವನಿಯಲ್ಲಿ ಸಾತ್ವಿಕ ಕ್ರೋಧ ಮತ್ತು ದುಃಖದ ತುಡಿತವಿತ್ತು. ಪವಾರ್ ಮತ್ತು ಗಂಗಾರಾಮ ಇವರ ಬಿಡುಗಡೆ ಕುರಿತಾಗಿ ಸರ್ದಾರ್ ಪಟೇಲರ ಗಮನ

ಸೆಳೆದ ಮೇಲೆಯೇ ಅವರ ಬಿಡುಗಡೆಯಾದದ್ದು” ವಿಷಾದದ ಸಂಗತಿಯಾಗಿದೆಂದು ಎನ್ನುತ್ತಾರೆ, ಗೋಪಾಲರಾವ ಹೇಜೀಬ್. (ಹೈದ್ರಾಬಾದ ಮುಕ್ತಿ ಸಂಘರ್ಷ ಪು.೧೬೮)

ಭಾರತೀಯ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬ್ರಿಟಿಷ್‌ರ ಮೇಲೆ ಮೊದಲಿಗೆ ಬಾಂಬ್ ಎಸೆದದ್ದು ಖುದಿರಾಮ್ ಬೋಸ್. ೧೮ನೇ ವಯಸ್ಸಿನಲ್ಲಿಯೇ ಆತ ಬಾಂಬ್ ಹಾಕಿದ್ದು ಸಾಮಾನ್ಯ ಮಾತಲ್ಲ! ಅದಕ್ಕಾಗಿ ಆತ ಗಲ್ಲುಶಿಕ್ಷೆ ಅನುಭವಿಸಬೇಕಾಯಿತು. ಅದೇ ರೀತಿ ಈ ಭಾಗದಲ್ಲಿ ನಾರಾಯಣರಾವ ಪವಾರ ಮತ್ತು ಆತನ ಸಂಗಡಿಗರು ಉಸ್ಮಾನ್ ಅಲಿಖಾನ್ ಮೇಲೆ ಬಾಂಬ್ ಹಾಕಿದರು. ಪೊಲೀಸ್‌ರ ಕೈಗೆ ಸಿಕ್ಕಿಬಿದ್ದು ಜೀವನದ ಬಹುಭಾಗವನ್ನು ಜೈಲಿನಲ್ಲಿ ಕಳೆಯಬೇಕಾಯಿತು.

### ೮. ಗಡಿ ಶಿಬಿರಗಳ ಕಾರ್ಯವೈಖರಿ:

ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಸ್ವಾಮಿ ರಮಾನಂದ ತೀರ್ಥರು ಸೊಲ್ಲಾಪುರದಲ್ಲಿ ಕರೆದಿದ್ದ ಸಭೆಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡುವವರ ಜೊತೆಗೆ ಶಸ್ತ್ರಧಾರಿಗಳ ಅವಶ್ಯಕತೆಯನ್ನು ಮನಗಂಡು ಗಡಿ ಶಿಬಿರ ರಚನೆ, ಆ ಮೂಲಕ ನಡೆಸಲ್ಪಡುವ ಚಳುವಳಿಗೆ ಸಮ್ಮತಿ ಸೂಚಿಸಲಾಗಿತ್ತು. ಆ ಕ್ರಿಯಾ ಸಮಿತಿಯ ನಿರ್ದೇಶನದಂತೆ ಹೈದರಾಬಾದ್ ಕರ್ನಾಟಕ ಕ್ರಿಯಾ ಸಮಿತಿಯನ್ನು ರಚಿಸಲಾಯಿತು.

ಕಾಂಗ್ರೆಸ್ ಕ್ರಿಯಾಸಮಿತಿಯ ನಿರ್ದೇಶನದಂತೆ ಬೀದರ ಸ್ವಾತಂತ್ರ್ಯ ಹೋರಾಟಕ್ಕಾಗಿ ನೂರಾರು ಗಡಿಶಿಬಿರಗಳು, ಹೋರಾಟದ ಕೇಂದ್ರಗಳು, ರಕ್ಷಣಾತ್ಮಕ ನೆಲೆಗಳು ಹುಟ್ಟಿಕೊಂಡವು. ಸ್ವಾತಂತ್ರ್ಯಪ್ರಾಪ್ತಿ, ಸ್ವಯಂರಕ್ಷಣೆ, ಆರ್ಥಿಕ ಪ್ರಗತಿ ಸಾಧಿಸುವ ವಿವಿಧ ಧ್ಯೇಯೋದ್ದೇಶಗಳನ್ನಿಟ್ಟುಕೊಂಡು ಸಂಘ ಸಂಸ್ಥೆಗಳು ರಚನೆಯಾದಂತೆ ಹೋರಾಟದ ರೂಪುರೇಷಗಳನ್ನು ಸಿದ್ಧಪಡಿಸಲು, ಅಲ್ಲಲ್ಲಿ ಸಂಭವಿಸುವ ಹೋರಾಟಕ್ಕೆ ತತ್‌ಕ್ಷಣದಲ್ಲಿ ಸಹಾಯಮಾಡಲು ಸಾಧ್ಯವಾಗುವಂತೆ ರಕ್ಷಣಾತ್ಮಕ ಗಡಿಶಿಬಿರಗಳು ಜನ್ಮತಳೆದವು. ನಿಜಾಂನ ಬಂಟರಂತೆ ವರ್ತಿಸುತ್ತ ಸಾಮಾಜಿಕ ಸ್ವಾಸ್ಥ್ಯವನ್ನು ಹಾಳುಗೆಡುವುತ್ತಿದ್ದ ರಜಾಕಾರರ ವಿರುದ್ಧ ಹೋರಾಡಲು ಇವು ಸನ್ನದ್ಧವಾಗಿದ್ದವು. ಯಾವ ಹಳ್ಳಿಯಲ್ಲಿ ರಜಾಕಾರರ ಹಾವಳಿ ಹೆಚ್ಚಾಗಿರುತ್ತದೆಯೋ ಅಥವಾ ಸಂಭಾವ್ಯ ದಾಳಿಯ ಮುನ್ಸೂಚನೆ ಬಂದಕೂಡಲೆ ಅಲ್ಲಿಗೆ ಗಡಿಶಿಬಿರಗಳ ಸ್ವಯಂಸೇವಕರು ಹಾಜರಾಗುತ್ತಿದ್ದರು. ಸಂತ್ರಸ್ತ ಜನರಿಗೆ, ಹಳ್ಳಿಗೆ ರಕ್ಷಣೆಯನ್ನೊದಗಿಸುತ್ತಿದ್ದರು. ಧಾರ್ಮಿಕ ಮತಾಂಧತೆಯನ್ನು ತಡೆಗಟ್ಟಲು ಹಿಂದುಗಳ ಮಾನರಕ್ಷಣೆಯ ಅವಶ್ಯಕತೆಯನ್ನರಿತು ಗಡಿಶಿಬಿರಗಳ ಕಾರ್ಯಕರ್ತರು ಹೋರಾಟ ಮಾಡುತ್ತಿದ್ದರು. ದೇಶಪ್ರೇಮಿಗಳಿಂದ ವಂತಿಗೆ ಸಂಗ್ರಹಿಸಿ, ಶಸ್ತ್ರಾಸ್ತ್ರ ಹೋರಾಟಕ್ಕೆ ಕಾರ್ಯಕರ್ತರನ್ನು ತರಬೇತಿಗೊಳಿಸುತ್ತಿದ್ದರು. ಕೆಲವೊಮ್ಮೆ ಹೆಚ್ಚಿನ ತರಬೇತಿಗಾಗಿ ಸಾತಾರಾ, ಪುಣೆ, ಸೊಲ್ಲಾಪುರ, ವಾರಂಗಲ್, ಕಾನ್ಪುರ ಮುಂತಾದ ಕಡೆಗಳಲ್ಲಿ ಇರುವಂತಹ ಶಸ್ತ್ರಾಸ್ತ್ರ ತರಬೇತಿ ಸಂಸ್ಥೆಗಳಿಗೆ ನವಯುವಕರನ್ನು ಕಳುಹಿಸಿಕೊಡುತ್ತಿದ್ದರು. ಈ ದಿಶೆಯಲ್ಲಿ ಬ್ರಿಜಪಾಲಸಿಂಗ್ ಠಾಕೂರ ಹಲವಾರು ಕಡೆಗಳಲ್ಲಿ ತರಬೇತಿ ಪಡೆದಿದ್ದ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

ರೈಫಲ್, ಸ್ಟೇನ್‌ಗನ್, ಕರಾಬಿನ್ ಬಂದೂಕು, ತಲವಾರ, ಭರ್ಚಿ, ಭರ್‍ರ್ಯಾ ಇತ್ಯಾದಿಗಳನ್ನು ಸಾತಾರಾ, ಗೋವಾ, ಪುಣೆ, ನಾಸಿಕ್, ಅಹಮದಪುರ, ನಾಂದೇಡಗಳಿಂದ ತರಿಸಿಕೊಳ್ಳುತ್ತಿದ್ದರು. ಒಂದೊಂದು ಶಿಬಿರವು ೨೦ ಕಿಲೋಮೀಟರ್ ವ್ಯಾಪ್ತಿಯಲ್ಲಿ ಸಂಭವಿಸುತ್ತಿದ್ದ ಪ್ರತಿರೋಧಗಳನ್ನು ನಿಯಂತ್ರಿಸುವಲ್ಲಿ ಪ್ರಯತ್ನಶೀಲರಾಗುತ್ತಿದ್ದರು. ಸಾಹಸಮಯ ಹೋರಾಟ, ಪ್ರಾಸಂಗಿಕ ಚಾಲಾಕಿತನದಿಂದ ಮಾಡಬೇಕಾದ ಕೆಲಸದಲ್ಲಿ ಸ್ವಲ್ಪ ಎಚ್ಚರ ತಪ್ಪಿದರೂ ಜೀವಹಾನಿ, ಅಪಾಯ ಕಟ್ಟಿಟ್ಟಬುತ್ತಿ ಎಂಬುದನ್ನು ಈ ಭಾಗದ ಸ್ವಾತಂತ್ರ್ಯಯೋಧರು ಅರಿತುಕೊಂಡಿದ್ದರು.

ಸ್ವಾತಂತ್ರ್ಯ ಹೋರಾಟ ಕೇಂದ್ರಿತ ಕೆಲಸಗಳಿಗಾಗಿ ಬೇಕಾಗುತ್ತಿದ್ದ ಹಣಕಾಸಿನ ನೆರವಿಗಾಗಿ ದೇಶಭಕ್ತ ಶ್ರೀಮಂತರನ್ನು ಆಶ್ರಯಿಸಿದ್ದರು. ಆರ್ಥಿಕ ಮುಗ್ಗಟ್ಟು ಎದುರಿಸುವಂತಹ ಪರಿಸ್ಥಿತಿ ಬಂದಾಗ ನಿಜಾಮನ ಕಛೇರಿಗಳ ಮೇಲೆ ದಾಳಿ ಮಾಡಿ ಶಸ್ತ್ರಾಸ್ತ್ರ, ಹಣವನ್ನು ವಶಪಡಿಸಿಕೊಳ್ಳುತ್ತಿದ್ದರು.

“ದಿನಾಂಕ ೦೮.೦೯.೧೯೪೮ರಂದು ಆರ್. ವಿ. ಬೀಡಪ, ಭೀಮರಾವ ಪಟವರ್ಧನರು ಗುಡ್ಡದ ಮಲ್ಲಾಪೂರದಿಂದ ಸೊಲ್ಲಾಪುರ ಶಿಬಿರಕ್ಕೆ ಶಸ್ತ್ರಾಸ್ತ್ರಗಳನ್ನು ಹೊತ್ತು ತರುತ್ತಿರುವಾಗ ಇವರನ್ನು ಬಂಧಿಸಲಾಯಿತು. ಆದರೆ ಘೂಲಚಂದ ಗಾಂಧಿಯವರ ಆಪ್ತಸಹಾಯಕ ಪಂಡಿತರಾವ ಬೋಕಿಲರವರ ಸಹಾಯದಿಂದ ನಾಲ್ಕು ತಾಸಿನಲ್ಲಿ ಬಿಡುಗಡೆ ಹೊಂದಿದ್ದರು” ಎಂದು ದೇಶಾಂಶ ಹುಡಗಿ ಸ್ಪಷ್ಟಪಡಿಸಿದ್ದಾರೆ.

ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಸುಮಾರು ೧೦೦ಕ್ಕೂ ಮೀರಿ ಗಡಿ ಶಿಬಿರಗಳು, ರಕ್ಷಣಾತ್ಮಕ ಕೇಂದ್ರಗಳಿದ್ದವು. ಅವುಗಳಲ್ಲಿ, ದುದನಿ, ಗೌಡಗಾಂವ, ವಾಗ್ಧರಿ, ಸಿಂಧಗಿ, ಕೇಸರ ಜವಳಗಾ, ಬಾರ್ಸಿ, ಕೌಳಖೇಡ, ತಾಳಿಕೋಟ, ಕಕ್ಕುಳಮೇಲಿ, ಹಳ್ಳಿಕಡೂರ, ಮುಂಡರಗಿ, ತೊಂಡಚಿರ, ಲಿಂಗದಳ್ಳಿ, ರಾಮಘಾಟ, ಜಾನಾಪುರ, ಅಟ್ಟರ್ಗಾ, ಬಗದಲ್, ಕಮಲನಗರ, ಮುಧೋಳ (ಬಿ.), ಡೋಣಗಾಂವ, ಮೈದರ್ಗಿ, ಸೊಲ್ಲಾಪುರ, ಗುಡ್ಡದ ಮಲ್ಲಾಪುರ, ಪಾಂಜ್ರಾಪೋಳ, ವಿಜಯವಾಡಾ ಮೊದಲಾದವು ಪ್ರಮುಖವಾಗಿದ್ದವು. ಅವುಗಳಲ್ಲಿ ಭಾಲ್ಕಿ ವ್ಯಾಪ್ತಿಯ ಅಟ್ಟರ್ಗಾ ಗಡಿ ಶಿಬಿರವು ಮುಖ್ಯವಾಗಿತ್ತು.

**ಅಟ್ಟರ್ಗಾ ಶಿಬಿರ:** ಭಾಲ್ಕಿ ತಾಲೂಕಿನ ಅಟ್ಟರ್ಗಾ ಶಿಬಿರದಲ್ಲಿ ಐವತ್ತು ಜನ ಕಾರ್ಯಕರ್ತರ ತಂಡವಿತ್ತು. ಭೀಮರಾವ ಮಿರಖಲ್ ಅಟ್ಟರ್ಗಾ ಶಿಬಿರದ ಚಾಲಕ ಶಕ್ತಿಯಾಗಿದ್ದರು. ಭೀಮರಾವ ಮಿರಖಲ್ ಬಲಿಷ್ಠ ವ್ಯಕ್ತಿಯಾಗಿದ್ದರಲ್ಲದೆ ಏಣಿಯ ಸಹಾಯವಿಲ್ಲದೆ ಎರಡಂತಸ್ತಿನ ಮನೆಗಳನ್ನು ಹಲ್ಲಿಯಂತೆ ಹತ್ತುತ್ತಿದ್ದರು. ರಜಾಕಾರರು ಸಂಗ್ರಹಿಸಿಟ್ಟಿದ್ದ ಸಾಮಗ್ರಿಗಳನ್ನು ದೋಚುತ್ತಿದ್ದರು ಎಂದು ನನ್ನ ಅಜ್ಜಿ ಚೆನ್ನವ್ವ ಪಾತ್ರೆ ತಿಳಿಸಿದ್ದರು. ಜೀರಗ್ಯಾಳ ಸ್ವಾಮೀಜಿಯೊಬ್ಬರು ಪ್ರತಿದಿನ ಅಟ್ಟರ್ಗಾ ಶಿಬಿರಕ್ಕೆ ಒಂದು ಚರಿಗೆ ಹಾಲನ್ನು ಉಚಿತವಾಗಿ ನೀಡುತ್ತಿದ್ದರು. ಚಂದ್ರಪ್ಪ ಪಟ್ನೆಯವರು ಶಿಬಿರದ ಸುದ್ದಿವಾಹಕರಾಗಿದ್ದರು.

ಈ ಶಿಬಿರದವರು ಬೋಳೆಗಾಂವ ಮತ್ತು ಭಾಟಸಂಗವಿ ಗ್ರಾಮಗಳ ನಡುವಿನ ಪ್ರದೇಶದಲ್ಲಿ ರಜಾಕಾರರ ಜೊತೆಗೆ ಹೋರಾಡಿ ೧೦ ಜನರನ್ನು ಕೊಂದಿದ್ದರು. ಈ ಕೇಸಿನ ಸಂಬಂಧ ನರಸಿಂಗರಾವ ಥೇಮಗಳೆ ವಿರುದ್ಧ ವಾರಂಟ್ ಜಾರಿಯಾದಾಗ ಅವರು ಕಾಳಗಾಪುರ ರೈಲು ನಿಲ್ದಾಣದಿಂದ ಸೊಲ್ಲಾಪೂರಕ್ಕೆ ಪಲಾಯನಗೈದರು. ಅಲ್ಲಿಂದ ಅವರು ವಾಗ್ಧರಿ, ಲಿಂಗದಳ್ಳಿ ಕ್ಯಾಂಪಿನೊಂದಿಗೆ ಗುರುತಿಸಿಕೊಂಡರು.

ಅಟ್ಟರ್ಗಾ ಶಿಬಿರಕ್ಕೆ ಭೇಟಿ ನೀಡಲು ಮೇಹಕರ ಮಾರ್ಗವಾಗಿ ನರಸಿಂಗರಾವ ಲಕ್ಷ್ಮಣರಾವ ಥೇಮಗಳೆಯವರು ಬರುತ್ತಿದ್ದಾಗ ಅಟ್ಟರ್ಗಾ ಗುಡ್ಡದ ಗವಿಯೊಂದರಲ್ಲಿ ಹುಲಿ ಇರುವುದನ್ನು ಗಮನಿಸಿದರು. ಮರದ ಮೇಲೆ ಕುಳಿತು ಹುಲಿಗೆ ಗುಂಡಿಟ್ಟು ಕೊಂದರು. ಈ ಧೈರ್ಯಶಾಲಿ ಕೃತ್ಯದಿಂದ ನರಸಿಂಗರಾವ ಥೇಮಗಳೆಯವರು ಮತ್ತಷ್ಟು ಜನಪ್ರಿಯರಾದರು.



**ಅಟ್ಟರ್ಗಾ ಯುದ್ಧ:** ರಜಾಕಾರರು ಗ್ರಾಮದಿಂದ ಗ್ರಾಮಕ್ಕೆ ಲೂಟಿ ಮಾಡುತ್ತ ಬರುತ್ತಿದ್ದರು. ಅಟ್ಟರ್ಗಾ ಗ್ರಾಮದಲ್ಲಿ ಟೋಳಿ ಇದ್ದದ್ದು ರಜಾಕಾರರಿಗೆ ಗೊತ್ತಿರಲಿಲ್ಲ. ಸಹಜವಾಗಿ ತುಪಾಕಿ ಸದ್ದು ಮಾಡುತ್ತ ದಾಳಿಯಲ್ಲಿ ನಿರತರಾದರು. ಈಗಾಗಲೇ ಅಟ್ಟರ್ಗಾದಲ್ಲಿದ್ದ ಟೋಳಿಯವರು ಮತ್ತು ಮಾಣಿಕರಾವ ಕೇರಬಾ ಮುಳೆಯವರ ನೇತೃತ್ವದ ಸೈನಿಕರ ತುಕಡಿ ರಜಾಕಾರರನ್ನು ಬೆನ್ನಟ್ಟಿ ಕೊಲೆಗೈದರು. ಕೊಲ್ಲಲ್ಪಟ್ಟ ನಿಜಾಂ ಪೊಲೀಸರನ್ನು, ರಜಾಕಾರನನ್ನು ಸಮೀಪದ ನದಿಯಲ್ಲಿ ಎಸೆದರು. ಮಾಣಿಕರಾವ ಮುಳೆ ಮುಂದಾಳತ್ವದ ಸೈನಿಕರಿಗೆ ಬೇಕಾಗಿರುತ್ತಿದ್ದ ಬಂದೂಕು, ಖಡ್ಗಗಳನ್ನು ಶಂಕರೆಪ್ಪ ಡೋಣಗಾಂವಕರ್‌ರವರು ಸರಬರಾಜು ಮಾಡಿದ್ದರು. ಇವರ ಸಹಾಯದಿಂದಾಗಿಯೇ ನಾವು ರಜಾಕಾರರನ್ನು ಎದುರಿಸಲು ಸಾಧ್ಯವಾಯಿತೆಂದು ಸಂಗ್ರಾಮಪ್ಪ ಧಬಾಲೆಯವರ ಮಗ ಬಸವರಾಜ ಧಬಾಲೆ (ವಯಸ್ಸು–೫೫) ಸ್ಮರಿಸಿಕೊಂಡಿದ್ದಾರೆ.

ಅಟ್ಟರ್ಗಾ ಟೋಳಿಯ ಜೊತೆಗೆ ನಿಕಟಸಂಬಂಧವನ್ನಿಟ್ಟುಕೊಂಡ ಬೋಳೆಗಾಂವ ಗ್ರಾಮದ ಸ್ವಾತಂತ್ರ್ಯ ಸೇನಾನಿಗಳೆಂದರೆ ಬಸವಣ್ಣಪ್ಪ ಮೂಲಗೆ (ಡಿಸೆಲ್ ಬಸಣ್ಣ), ಅಪ್ಪಾರಾವ ಪಾಟೀಲ, ಸಂಗ್ರಾಮಪ್ಪ ಧಬಾಲೆ, ಧೂಳಪ್ಪ ಧಬಾಲೆ, ಬಸವಣಪ್ಪ ಸಂಗಪ್ಪ ವಲಂಡೆ ಮೊದಲಾದವರು.

**ಹಿಂದೂ ಟೋಳಿ:** 'ಭೂಗತ ವೀರ'ನೆಂದು ಖ್ಯಾತಿ ಪಡೆದಿದ್ದ ವೀರಸಂಗಪ್ಪ ಭೀಮಣ್ಣ ಬಿರಾದಾರ ಇವರ ನೇತೃತ್ವದಲ್ಲಿ ಭಾತಂಬ್ರಾ ಗ್ರಾಮದಲ್ಲಿ 'ಹಿಂದೂ ಟೋಳಿ' ಹುಟ್ಟಿಕೊಂಡಿತ್ತು. ಇದಕ್ಕೆ ಮಾರ್ಗದರ್ಶಕರಾಗಿ ಯಶವಂತರಾವ ಸಾಯಗಾಂವಕರ, ಹಕೀಕತರಾವ ಚಿಡಗುಪ್ಪೆಕರ್, ಮಹಾದಪ್ಪ ಲೋಖಂಡೆ ಕೆಲಸ ಮಾಡುತ್ತಿದ್ದರು. ಈ ಟೋಳಿಯಲ್ಲಿ ಮುಖ್ಯವಾಗಿ ಮಲಶೆಟ್ಟೆಪ್ಪ ಬಿರಾದಾರ (ಕೋಣೆ), ಸಿದ್ಧಲಿಂಗಪ್ಪ ಬಿರಾದಾರ, ನಾಗಶೆಟ್ಟಿ ಗುಬ್ಬೆ, ಸಂಗಪ್ಪ ಲದ್ದೆ ಮೊದಲಾದವರಿದ್ದರು. ಅದರಲ್ಲಿ ವಿಶ್ವನಾಥ ಸೂರ್ಯವಂಶಿ (ಕಾರಾಗಿರ) ಇವರು ಹಿಂದೂ ಟೋಳಿಯಲ್ಲಿ ಗಾಯಗೊಂಡ ಕಾರ್ಯಕರ್ತರಿಗೆ ಚಿಕಿತ್ಸೆ ನೀಡುವ ವೈದ್ಯರಾಗಿ ಕೆಲಸ ಮಾಡುತ್ತಿದ್ದರು.

ಭಾತಂಬ್ರಾ ಗ್ರಾಮದ ಅಮೃತರಾವ ಸಂಗಶೆಟ್ಟೆಪ್ಪ ಮಾಲಿಪಾಟೀಲ ಮತ್ತು ಶಂಕರರಾವ ಸಂಗಶೆಟ್ಟೆಪ್ಪ ಮಾಲಿಪಾಟೀಲ ಇವರ ಇನಾಮತಿ ಹೊಲದಲ್ಲಿ ಹಿಂದೂ ಟೋಳಿ ಕೇಂದ್ರವನ್ನಾಗಿ ಮಾಡಿಕೊಂಡು ಸಕ್ರಿಯವಾಗಿತ್ತು. ಈ ಇನಾಮತಿ ಹೊಲವು ೪೦ ಎಕರೆಯ ಪ್ರದೇಶವನ್ನು ವ್ಯಾಪಿಸಿತ್ತು. ಇದರಲ್ಲಿ ಸುಮಾರು ಮುನ್ನೂರು ಹೆಸರುವಾಸಿಯಾದ ಮಾವಿನ ಹೆಮ್ಮರಗಳಿದ್ದವು. ಇಲ್ಲಿಂದಲೇ

ಹೈದರಾಬಾದಿನ ನಿಜಾಮರಿಗೆ ಫಲಭರಿತ ಮಾವಿನಹಣ್ಣುಗಳನ್ನು ಕಳುಹಿಸುತ್ತಿದ್ದರು. ಬೃಹತ್ ಅರಣ್ಯ ಪ್ರದೇಶ ಹೊಂದಿದ್ದ ಇನಾಮತಿ ಹೊಲದಲ್ಲಿ ಹುಲಿ, ಚಿರತೆಗಳು ಸಹ ವಾಸವಾಗಿದ್ದವು. ಹುಲಿಯ ಎರಡು ಮರಿಗಳನ್ನು ಅಣ್ಣಾರಾವ ಮಾಲಿಪಾಟೀಲ ಸಾಕಿದ್ದರು. ಒಮ್ಮೆ ಸಿಟ್ಟಿಗೆದ್ದ ಹುಲಿ ಬಸವರಾಜ ಅಣ್ಣಾರಾವ ಮಾಲಿಪಾಟೀಲರ ಬಲಗೈಭುಜದಿಂದ ಮುಂಗೈವರೆಗೆ ಬರಚಿತ್ತು. ಈ ಘಟನೆ ನಡೆದ ಮೇಲೆ ಆ ಹುಲಿಗಳನ್ನು ಬೀದರನಲ್ಲಿ ಓರಿಯಂಟ್ ಸರ್ಕಸ್ ಕಂಪನಿಗೆ ಹಸ್ತಾಂತರ ಮಾಡಿದರೆಂದು ನ್ಯಾಯವಾದಿ ಸಂಗಶೆಟ್ಟಿ ಅಮೃತರಾವ ಪಾಟೀಲರು ತಿಳಿಸಿದ್ದಾರೆ.

ಒಮ್ಮೆ ಇಂಗ್ಲಿಷ ಅಧಿಕಾರಿಯೊಬ್ಬ 'ಹಿಂದೂ ಟೋಳಿ'ಯನ್ನು ಬೆಳೆಸಲು ನಿಮ್ಮ ಇನಾಮತಿ ಹೊಲವನ್ನು ಬಳಸುತ್ತಿದ್ದೀರಿ. ಇದೊಂದು ದೇಶದ್ರೋಹ ಕೆಲಸವಾಗಿದೆ. ನೀವು ಅವರಿಗೆ ಆಶ್ರಯ ನೀಡಿ ಏಕೆ ಸಂಘಟನೆಯನ್ನು ನಡೆಸುತಿದ್ದೀರಿ ಎಂದು ಅಣ್ಣಾರಾವ, ಶಂಕರರಾವ, ಮತ್ತು ಅಮೃತರಾವ ಮಾಲಿಪಾಟೀಲರಿಗೆ ತೊಂದರೆ ಕೊಟ್ಟನು. ಇದನ್ನು ತಿಳಿದ ಹಿಂದೂ ಟೋಳಿಯವರು ಆ ಅಧಿಕಾರಿಯನ್ನು ಹಣ್ಣುಗಾಯಿ ನೀರುಗಾಯಿ ಮಾಡಿ ಕಳುಹಿಸಿದರು. ಆಮೇಲೆ ಯಾವೊಬ್ಬ ಅಧಿಕಾರಿ ಮತ್ತು ರಜಾಕಾರರು ಹಿಂದೂ ಟೋಳಿಯ ಹೆಸರಿಗೆ ಬರಲಿಲ್ಲ.

ಈ ಟೋಳಿಯವರು ಸುಮಾರು ೪೦ರಿಂದ ೫೦ ಕೋವಿಗಳನ್ನು ಬಳಸುತ್ತಿದ್ದರು. ಇವುಗಳ ಜೊತೆಗೆ ಜಂಬಿಯಾ, ತಲವಾರ್ ಹಾಗೂ ಬರ್ಚಿಗಳ ಸಂಗ್ರಹ ಹೊಂದಿದ್ದರು. ಈ ಟೋಳಿಯ ಎಲ್ಲ ಖರ್ಚುವೆಚ್ಚಗಳನ್ನು ಮಾಲಿಪಾಟೀಲ ಕುಟುಂಬವು ವಹಿಸಿಕೊಂಡಿತ್ತು. ಸ್ವಾತಂತ್ರ್ಯೋತ್ತರ ಕಾಲದ ವರೆಗೆ ಚಾಲ್ತಿಯಲ್ಲಿದ್ದ ಈ ಟೋಳಿಯ ಶಸ್ತ್ರಾಸ್ತ್ರಗಳನ್ನು ವಿರಕ್ತ ಮಠದ ಪಶ್ಚಿಮ ದಿಕ್ಕಿನಲ್ಲಿರುವ ಬಾವಿಗೆ ಹಾಕಿದರು. ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು ಅಪರಾಧವೆಂದು ಅವರು ತಿಳಿದಿದ್ದರು.

**ಜಾಗೃತಿ ಕೇಂದ್ರವಾಗಿ ಭಾತಂಬ್ರಾ:** ಭಾರತ ಮಾತೆಯನ್ನು ಸ್ವಾತಂತ್ರ್ಯಗೊಳಿಸುವಲ್ಲಿ, ಅನ್ಯಾಯದ ವಿರುದ್ಧ ಹೋರಾಟ ಮಾಡುವಲ್ಲಿ ಭಾತಂಬ್ರಾ ಗ್ರಾಮವು ಮಹತ್ವದ ಪಾತ್ರವಹಿಸಿದೆ. ಇಲ್ಲಿಯ ಸ್ವಾಭಿಮಾನಿಗಳು ನಿಜಾಮ ಕ್ರೌರ್ಯದ ವಿರುದ್ಧ ಬಂಡೆದ್ದು ಪ್ರಾಣಾರ್ಪಣೆ ಮಾಡಿದ್ದಾರೆ. ಹೈದ್ರಾಬಾದ್ ನಿಜಾಮ ಮೀರ್ ಮಹಬೂಬ್ ಅಲಿಖಾನ್ ಮತ್ತು ಆತನ ಉತ್ತರಾಧಿಕಾರಿಗಳು ಇಂಗ್ಲಿಷರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ವೈಸರಾಯರು ನಿಜಾಮನ



ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು ಜನತೆಯ ಆಶೋತ್ತರಗಳಿಗೆ ಸ್ಪಂದಿಸದೆ ಜನರ ಆಸ್ತಿಪಾಸ್ತಿಗಳನ್ನು ಹಾಳು ಮಾಡಿ, ಸಿಕ್ಕಲ್ಲಿ ಜನರನ್ನು ಸುಲಿಗೆ ಮಾಡುತ್ತಿದ್ದರು. ಮೇಲಾಗಿ ಸ್ವಾತಂತ್ರ್ಯ ಸಂಗ್ರಾಮವನ್ನು ಹತ್ತಿಕ್ಕಲು ನಿಜಾಮ ತನ್ನ ಸೈನ್ಯವನ್ನು ಬ್ರಿಟಿಷರ ಆಡಳಿತದಲ್ಲಿ ತೊಡಗಿಸಿದ್ದನು. ಹೀಗಾಗಿ ಇಲ್ಲಿಯ ನಾಗರಿಕರಿಗೆ ನಿಜಾಮ–ಬ್ರಿಟಿಷರ ಕುತಂತ್ರದಾಟ ರೊಚ್ಚಿಗೆಬ್ಬಿಸಿತ್ತು. ಆ ಪ್ರಯುಕ್ತ ಇಲ್ಲಿಯವರು ಏಕಕಾಲದಲ್ಲಿ ವಸಾಹತುಶಾಹಿ, ನಿಜಾಮ ಪ್ರಭುತ್ವ, ರಜಾಕಾರರ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯವಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದ ಸೇನಾನಿಗಳ ಭಾಷಣದ ಮೌಖಿಕ ಅವತರಣಿಕೆಗಳು, ವೃತ್ತ ಪತ್ರಿಕೆಗಳಲ್ಲಿನ ಸುದ್ದಿಗಳು ಭಾತಂಬ್ರಾದಲ್ಲಿಯೂ ಪ್ರಾಮುಖ್ಯತೆ ಪಡೆದಿದ್ದವು. ಇಲ್ಲಿಯ ಸ್ವಾತಂತ್ರ್ಯ ಹೋರಾಟಗಾರರಾದ ಕೋಂಡುಪಂತ ಕುಲಕರ್ಣಿ, ಮಾರುತೆಪ್ಪ ಖಂಡಾಳೆ, ಧೂಳಪ್ಪ ಚೆನ್ನಪ್ಪ ಖರಾಬೆ, ಧೂಳಪ್ಪ ಭೀಮಣ್ಣ ಬಿರಾದಾರ, ಚೆನ್ನಪ್ಪ ಭಂಡೆ, ಗಿರೆಪ್ಪ ದಾಡಗೆ, ಮೋತಿಸಿಂಗ ರಾಜಪೂತ, ಸರದಾರ ಬೇಗ, ಬಾಳಾರಾಮ ರಾಠೋಡ, ವಿಶ್ವನಾಥರಾವ ವೀರಶೆಟ್ಟಿ ಬಿರಾದಾರ, ವಿಶ್ವನಾಥ ಮಾಧವರಾವ ಬಿರಾದಾರ (ಧರ್ಮಣ್ಣ), ಗೌಸೋದ್ದಿನ ಪಾಸಾ, ಫತ್ರುಮಿಯಾ, ಅಬ್ಬಾಸ ಅಲಿ, ನಿಂಗಶೆಟ್ಟಿ ಗಾಮಾ, ಸಿದ್ಧಪ್ಪಾ ತೇಲಿ, ಹೀರಾಸಿಂಗ ರಾಜಪೂತ, ಮೋಸಿನಸಾಬ ಸೈಯದವಾಲೆ, ಸೈಯದ್ ರಜಾಕ, ಬಸವಣ್ಣಪ್ಪ ಕೇಸ್ಕರ, ಶರಣಪ್ಪ ನಳಗಾಂವೆ, ಅಣ್ಣೆಪ್ಪ ಮಡೋಳಪ್ಪ ಬಿರಾದಾರ ಮುಂತಾದವರೆಲ್ಲ ನಾಸಿಕ, ಪೂನಾ, ಸೋಲಾಪುರ, ಹೈದ್ರಾಬಾದ, ಬೀದರ್, ಕಲಬುರ್ಗಿ, ಲಾತೂರ ಮುಂತಾದ ಕಡೆಗಳಲ್ಲಿ ಸಂಚರಿಸಿ ವ್ಯಾಪಾರದ ಜೊತೆಗೆ ದೇಶದ ಹಿರಿಯ ನಾಯಕರ ನುಡಿಕಿಡಿಗಳನ್ನು ಹೊತ್ತುಕೊಂಡು ತರುತ್ತಿದ್ದರು. ನಾನು ಕೆಲವರೊಂದಿಗೆ ಚರ್ಚಿಸಿದಾಗ– "ಸಮಯ ಸಿಕ್ಕಾಗಲೆಲ್ಲ ಮಧ್ಯ ರಾತ್ರಿಯ ವೇಳೆಗೆ ಗ್ರಾಮದ ಹಿರಿಯರು, ಹೋರಾಟಗಾರರು ಮಾಲಿಗೌಡರ ಇನಾಮತಿ ಹೊಲದಲ್ಲಿ ಸೇರಿ ತಮ್ಮ ವಿಚಾರಗಳನ್ನು ಮಂಡಿಸಿ, ಸೂಕ್ತಕ್ರಮ ಕೈಗೊಳ್ಳುತ್ತಿದ್ದೆವು. ಪರಿಸ್ಥಿತಿಯ ಲಾಭ ಪಡೆದು ನಿಜಾಮ ಅಧಿಕಾರಿಗಳಿಗೆ ತೊಂದರೆ ಕೊಟ್ಟಿದ್ದೇವೆ" ಎಂದು ತಮ್ಮ ಅನುಭವಗಳನ್ನು ದಿ. ವಿಶ್ವನಾಥರಾವ ಬಿರಾದಾರ ನನ್ನೆದುರು ಸಂತೋಷದಿಂದ ಹೇಳಿಕೊಂಡಿದ್ದರು.

**ಕಿಸಾನ ದಳ:** ಯಶವಂತರಾವ ಸಾಯಗಾಂವಕರ ಅಧ್ಯಕ್ಷತೆಯಲ್ಲಿ ಹುಟ್ಟಿಕೊಂಡ ಕಿಸಾನ ದಳವು ೩೦ ರಿಂದ ೪೦ ಕ್ರಾಂತಿಕಾರಿ ಮನೋಭಾವದ ಯುವಕರ ತಂಡವಾಗಿತ್ತು. ಡಾ. ಚೆನ್ನಪ್ಪ ಕಾಸರತುಗಾಂವಕರ ಅವರು

ಸಂಘಟನೆಯ ಅಧ್ಯಕ್ಷರಾಗಿದ್ದರು. ನವಯುವಕರನ್ನು ತರಬೇತಿಗೊಳಿಸುವ ಹೊಣೆಯನ್ನು ವೆಂಕಟರಾವ ಮಿರಖಲ್ ಅವರಿಗೆ ವಹಿಸಲಾಗಿತ್ತು. ಮಾಣಿಕರಾವ ಮೂಳೆ ಡೋಣಗಾಂವ, ಮಾಣಿಕರಾವ ರಾಜೂ ಡೋಣಗಾಂವ, ಭೀಮರಾವ ಬಿರಾದಾರ ಮಿರಖಲ್‌ಕರ್ ತಾ: ಬಸವಕಲ್ಯಾಣ, ವೆಂಕಟರಾವ ಮೂಳೆ ಮಿರಖಲ್‌ಕರ್ ತಾ: ಬಸವಕಲ್ಯಾಣ, ಭಾವುರಾವ ಪಾಟೀಲ ಹೊನ್ನಳ್ಳಿ, ನಾಗೋರಾವ ಗುಂಡಾಜಿ ಬಿರಾದಾರ ಸೇರಿದಂತೆ ಹಲವರು ಕಿಸಾನ ದಳದಲ್ಲಿದ್ದರು.

ಅತ್ಯಲ್ಪ ಪ್ರಮಾಣದ ಜನರೇ ದೌರ್ಜನ್ಯದಿಂದ ಅಧಿಕಾರ ಚಲಾಯಿಸುವುದು ಶೇಕಡಾ ೮೬ರಷ್ಟಿದ್ದ ಹಿಂದುಗಳಿಗೆ ಸಹಿಸಲಸಾಧ್ಯವಾದ ಸಂಗತಿಯಾಗಿತ್ತು. ಸ್ವಂತಿಕೆಯನ್ನು ಕಾಯ್ದುಕೊಳ್ಳುವುದರ ಜೊತೆಗೆ ಮುಗ್ಧಜನರ ಮೇಲಾಗುತ್ತಿರುವ ದಬ್ಬಾಳಿಕೆಯನ್ನು ತಡೆಗಟ್ಟಲು ಕಿಸಾನದಳ ಸಂಘಟನೆಯ ಉದ್ದೇಶವಾಗಿತ್ತು.

ಕಿಸಾನ ದಳದ ಸ್ವಯಂಸೇವಕರು ಶಸ್ತ್ರಸಜ್ಜಿತ ರಜಾಕಾರರ ವಿರುದ್ಧ ಹೋರಾಡುವುದು ಪ್ರಯಾಸದ ಕೆಲಸವಾದರೂ ಭೂಗತರಾಗಿ ಹಿಂದು ಸಂಘಟನೆ ಮಾಡುತ್ತಿದ್ದರು. ಹಿಂಸೆಯಿಂದ ನರಳುತ್ತಿದ್ದ ಅಸಂಖ್ಯಾತರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದರು. ಇಂತಹ ಪ್ರದೇಶದಲ್ಲಿ ರಜಾಕಾರರ ಹಾವಳಿ, ಗಲಭೆ ಸಂಭವಿಸುವ ಸೂಚನೆಗಳಿವೆ ಎಂದು ಗೊತ್ತಾದ ತಕ್ಷಣ ಅಲ್ಲಿಗೆ ಧಾವಿಸಿ ಹೋಗುತ್ತಿದ್ದರು. ತಮ್ಮಿಂದ ಆದಷ್ಟು ಅವರಿಗೆ ಸಹಾಯ ಮಾಡುತ್ತಿದ್ದರು. ಹೆದರಿಸಿ ಹಣ, ಬಂಗಾರ, ಬೆಳ್ಳಿ ನಾಣ್ಯಗಳನ್ನು ವಸೂಲಿ ಮಾಡುತ್ತಿದ್ದ ರಜಾಕಾರರ ಕೃತ್ಯಗಳನ್ನು ವಿಫಲಗೊಳಿಸುತ್ತಿದ್ದರು. ಒಂದು ರೀತಿಯಲ್ಲಿ ಕಿಸಾನ ದಳದ ಸೇವಕರು ರಜಾಕಾರ ಮತ್ತು ನಿಜಾಂ ಪೊಲೀಸರಿಗೆ ಸಿಂಹಸ್ವಪ್ನರಾಗಿದ್ದರು.

ಫತೇಅಲಿ ಮದದ್‌ಗಾರ, ಚಾವೇಶ ಸರ್ಕಲ್ ಇನ್ಸ್‌ಪೆಕ್ಟರ್, ಅಬ್ದುಲ್ ಮನ್ನಾನ್ ಸಬ್‌ಇನ್ಸ್‌ಪೆಕ್ಟರ್ ಸೇರಿದಂತೆ ಐದು ಜನ ಪೊಲೀಸರನ್ನು ಅಟ್ಟರ್ಗಾದಲ್ಲಿ ಅಟ್ಟಾಡಿಸಿ ಕೊಲೆ ಮಾಡಿದರು. ಈ ಕೇಸಿನಲ್ಲಿ ಯಶವಂತರಾವ ಸಾಯಗಾಂವಕರ್, ಮಾಣಿಕರಾವ ಘುಲೇಕರ, ಭೀಮರಾವ, ಮುರಳಿಧರರಾವ ಘುಲೇಕರ ಸೇರಿದಂತೆ ೧೪ ಜನರ ವಿರುದ್ಧ ಕೇಸ್ ದಾಖಲಿಸಲಾಗಿತ್ತು.

Police Nilanga v/s Yeshwanthrao and other ಶಹರೆವರ ೧೩೫೮ (೧೩೫೭) ಫಸಲಿ C.C.No. ೭೧/೫/೧೩೫೮ ಫಸಲಿ



"ಜಿಲ್ಲೆಯ ಹದಿನೈದು ಕಡೆಗಳಲ್ಲಿ ರಜಾಕಾರ ಪಡೆಗಳ ಅಕೃತ್ಯಗಳನ್ನು ವಿಫಲಗೊಳಿಸಿ ಹಿಮ್ಮೆಟ್ಟಿಸಿದ್ದೇವೆ. ಅಟ್ಟರ್ಗಾ ಯುದ್ಧದಲ್ಲಿ ಅವರೊಂದಿಗೆ ಹೋರಾಡುವಾಗ ಎರಡು ಸಲ ಬಂದೂಕಿನ ಗೋಲಿಗೆ ನಾನು ಗುರಿಯಾಗಿದ್ದೇನೆ. ಭಾಲ್ಕಿ ಠಾಣೆಯ ಅಬ್ದುಲ್ ಮನ್ನಾನ್ ಸಬ್‌ಇನ್ಸ್‌ಪೆಕ್ಟರ್ ಅವರ ಜೊತೆಯಲ್ಲಿದ್ದ ನಾಲ್ಕು ಪೊಲೀಸ್ ಕರ್ಮಚಾರಿಗಳ ಹತ್ಯೆ ಮಾಡಿದ್ದಕ್ಕಾಗಿ ನಾನು ಜೈಲು ಶಿಕ್ಷೆ ಅನುಭವಿಸಬೇಕಾಯಿತು" ಎಂದು ಯಶವಂತರಾವ ಸಾಯಗಾಂವಕರ್ ಸಂದರ್ಶನದಲ್ಲಿ ಹೇಳಿದ್ದಾರೆ.

ಮಾದನ ಹಿಪ್ಪರ್ಗಾ ಯುದ್ಧದಲ್ಲಿ ಕಿಸಾನ ದಳವು ಬಹಳಷ್ಟು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮುಖ್ಯವಾಗಿ ಡಾ. ಚೆನ್ನಪ್ಪ ಕಾಸರತುಗಾಂವಕರ, ವೆಂಕಟರಾವ ಮೂಳೆ ಮಿರಖಲ್ಕರ್ ಮತ್ತು ಸಿದ್ರಾಮ ಎನ್ನುವವರು ಮಾದನಹಿಪ್ಪರ್ಗಾದಲ್ಲಿ ರಜಾಕಾರರೊಂದಿಗೆ ಹೋರಾಡುವಾಗ ಸಾವನ್ನಪ್ಪಿದರು.

ಕಿಸಾನ ದಳದ ಕಾರ್ಯಕರ್ತರು ಸಾಯಗಾಂವ, ಹಂದ್ರಾಳ, ಮೆಹಕರ, ಅಟ್ಟರ್ಗಾ, ಶಹಜಾನಿ ಅವರಾದ, ಹತ್ತಿಬೇಟ, ರಾಮಘಾಟ, ತೊಂಡಚಿರ, ಡೋಣಗಾಂವ, ಶೇಳಗಿ, ಬೆಟಕುಲ, ಮುಗುಳಿ ಮತ್ತು ಮಾದನ ಹಿಪ್ಪರ್ಗಾಗಳಲ್ಲಿ ರಜಾಕಾರ ಜೊತೆಗೆ ನಡೆದ ಸಂಘರ್ಷಗಳಲ್ಲಿ ಪಾಲ್ಗೊಂಡಿದ್ದರು ಎಂದು ಗೊತ್ತಾಗುತ್ತದೆ.

**ಸಾಯಗಾಂವ ಮತೀಯ ಗಲಭೆ:** ಸಾಯಗಾಂವದಲ್ಲಿ ನಡೆದ ಹಿಂದು–ಮುಸ್ಲಿಂ ದಂಗೆಯಲ್ಲಿ ಖಾದರ ಸಾಹೇಬ ಅಜನಿಯೆಂಬವನು ಕೊಲ್ಲಲ್ಪಟ್ಟನು. ಹಲವು ರಜಾಕಾರರು ಗಾಯಗೊಂಡರು. ಇದಕ್ಕೆ ಪ್ರತಿಯಾಗಿ ರಜಾಕಾರರು ರಾಮಚಂದ್ರರಾವ ಮಳೆಕಾರಿ, ಈಶ್ವರರಾವ ಮಳೆಕಾರಿ, ರಾಮಚಂದ್ರರಾವ ದೇಶಪಾಂಡೆ ಮತ್ತು ನಾರಾಯಣರಾವ ದೇಶಪಾಂಡೆಯವರನ್ನು ಜೀವಂತವಾಗಿ ಅಗ್ನಿಗೆ ಬಲಿ ನೀಡಿದರು. ಇವರನ್ನು ರಕ್ಷಿಸಿಕೊಳ್ಳಲು ಬಂದಿದ್ದ ನಾಗೋರಾವ ಬಿರಾದಾರ, ಶಂಕರರಾವ ಮಾಧವರಾವ ಸಾವರೆಯವರ ಮೇಲೂ ಹಲ್ಲೆ ಮಾಡಿದರು. ರಕ್ತಸಿಕ್ತ ಶಂಕರರಾವ ಸಾವರೆಯವರು ರಜಾಕಾರರಿಂದ ತಪ್ಪಿಸಿಕೊಂಡು ಅಟ್ಟರ್ಗಾ ಶಿಬಿರಕ್ಕೆ ಪಲಾಯನಗೈದರು.

**ಮೆಹಕರ ಅತ್ಯಾಚಾರ:** ಭಾಲ್ಕಿ ತಾಲೂಕಿನ ಮೆಹಕರದಲ್ಲಿ ಕಿಸಾನದಳ ಸಕ್ರಿಯವಾಗಿತ್ತು. ರಜಾಕಾರ ಗುಂಪಿನೊಂದಿಗೆ ಆಗಾಗ ಹೋರಾಟ ಮಾಡುತ್ತಿತ್ತು. ಒಮ್ಮೆ ಮೆಹಕರ ಗ್ರಾಮದ ಮಹಿಳೆ ಮತ್ತು ಅವಳ ಮಗಳನ್ನು ರಜಾಕಾರ

ಮುಖಂಡ ಖಾದರ ಪಾಶಾ ಮಾಂಜ್ರಾ ನದಿದಂಡೆಯಲ್ಲಿ ಬಟ್ಟೆ ಒಗೆಯಲು ಹೋಗಿದ್ದ ಅವರನ್ನು ಚುಡಾಯಿಸಿ ಅತ್ಯಾಚಾರಕ್ಕೆ ಪ್ರಯತ್ನಿಸುತ್ತಿದ್ದನು. ಅವರಿಬ್ಬರು ಸಹಾಯಕ್ಕಾಗಿ ಕೂಗಿದರು. ಯಾರೂ ಮುಂದೆ ಬರದಿದ್ದಾಗ ಯಶವಂತರಾವ ಸಾಯಗಾಂವಕರ್ ಮತ್ತು ಇತರರು ಖಾದರ ಪಾಶಾನ ಕೃತ್ಯವನ್ನು ಪ್ರತಿಭಟಿಸಿದರು. ಇದನ್ನು ಸಹಿಸದ ರಜಾಕಾರನೊಬ್ಬ ಮಾಧವರಾವ ಹಸೂರೆಯನ್ನು ಗುಂಡಿಕ್ಕಿ ಕೊಂದನು. ಯಶವಂತರಾವರ ಮೇಲೂ ಮಾರಣಾಂತಿಕ ಹಲ್ಲೆ ಮಾಡಿದರು. ಯಶವಂತರಾವ ಇದರಿಂದ ತಪ್ಪಿಸಿಕೊಂಡು ಅಟ್ಟರ್ಗಾ ಗ್ರಾಮದ ಲಿಂಬಾಜಿರಾವ ವಿಠೋಬಾ ಬಿರಾದಾರ ಮನೆಯಲ್ಲಿ ಆಶ್ರಯ ಪಡೆದರು. ಲಿಂಬಾಜಿರಾವ ಇವರ ಸೋದರಮಾವರಾಗಿದ್ದರು. ಪರಸ್ಪರ ಹೋರಾಟ ತೀವ್ರಗೊಂಡಾಗ ರಜಾಕಾರರು ಮೆಹಕರಕ್ಕೆ ಬೆಂಕಿ ಹಚ್ಚಿದರು. ಜ್ಞಾನೋಬಾ ಗೌಂಡಿ, ಅಪ್ಪಾರಾವ ಪಾಟೀಲ ಬೋಳೆಗಾಂವ, ಸಮರ್ಥರಾವ ಭಾಟಸಂಗವಿ, ತುಳಸಿರಾಮ ಹಡೋಳಿಯವರನ್ನು ಜೀವಂತವಾಗಿ ಬೆಂಕಿಗೆ ಆಹುತಿ ನೀಡಿದರು.

## ೯. ಭೀಮಣ್ಣ ಖಂಡ್ರೆಯವರ ಮನೆ ಮೇಲೆ ದಾಳಿ:

ಭೀಮಣ್ಣ ಖಂಡ್ರೆಯವರು ೧೯೪೬ರಿಂದ ನಿರಂತರವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು. ರಜಾಕಾರ ಹಾವಳಿಗೆ ತುತ್ತಾದ ಗೋರ್ಟಾ, ಹೊನ್ನಳ್ಳಿ, ಹಾಳಗೋರ್ಟಾ, ಮುಧೋಳ (ಬಿ) ಮೊದಲಾದ ಗ್ರಾಮಗಳಿಗೆ ಭೇಟಿ ನೀಡಿದ್ದರು. ಶಾಂತಿ ಸುವ್ಯವಸ್ಥೆಗೆ ಪ್ರಯತ್ನಿಸುತ್ತಿದ್ದರು. ಎಲ್ಲ ವಿಷಯದಲ್ಲೂ ಜಾಗ್ರತೆವಹಿಸುಂತೆ ನೊಂದವರಿಗೆ ಸಲಹೆ ನೀಡುತ್ತಿದ್ದರು.

ಗೋರ್ಟಾ ಹತ್ಯಾಕಾಂಡ ನಡೆದ ಮೇಲೆ ಮುಂಜಾಗ್ರತಾ ಕ್ರಮವಾಗಿ ಭೀಮಣ್ಣ ಖಂಡ್ರೆಯವರನ್ನು ಬಂಧಿಸಿ ಬೀದರ ಜೈಲಿಗೆ ಹಾಕಲಾಯಿತು. ಈ ಸಮಯ ಸಾಧಿಸಿ ಅತೃಪ್ತಗೊಂಡ ೪೦೦ ಜನ ರಜಾಕಾರರು ಫೈಜುಲ್ಲಾ ಬೇಗ್ ವಕೀಲರ ನೇತೃತ್ವದಲ್ಲಿ ಭೀಮಣ್ಣ ಖಂಡ್ರೆಯವರ ಮನೆ ಮೇಲೆ ದಾಳಿ ಮಾಡಿದರು.

ಭೀಮಣ್ಣ ಖಂಡ್ರೆಯವರ ಅಣ್ಣ ಕಾಶಪ್ಪ ಖಂಡ್ರೆಯವರ ಆರ್ಭಟದ ಕೂಗಿಗೆ ರಜಾಕಾರರು ಓಡಿ ಹೋದರು. ನಂತರದಲ್ಲಿ ವಾತಾವರಣ ತಿಳಿಗೊಂಡಿತು. ಭೀಮಣ್ಣ ಖಂಡ್ರೆಯವರ ಅಸ್ತಿತ್ವ, ಹೋರಾಟದ ಮನೋಭಾವ ಅರಿತ ರಜಾಕಾರರು ಮುಂದೆ ಅವರ ಮನೆಯತ್ತ ಸುಳಿಯಲಿಲ್ಲ. ಅವರನ್ನು ಕಂಡಾಗಲೆಲ್ಲ ಭಯಭೀತರಾಗುತ್ತಿದ್ದರು.



ಹೈದರಾಬಾದ ಕರ್ನಾಟಕ ವಿಮೋಚನೆಯಾದ ಮೇಲೆ ರಜಾಕಾರರಿಂದ ಅವಮಾನಿತರಾದವರು, ಶೋಷಣೆಗೊಳಗಾದವರು ದಂಗೆಗಿಳಿದರು. ಪ್ರತೀಕಾರಕ್ಕೆ ಹಿಂದುಗಳು ಮುಂದಾದರು. ಇದನ್ನರಿತ ಮುಸಲ್ಮಾನರು ಭೀಮಣ್ಣ ಖಂಡ್ರೆಯವರಲ್ಲಿಗೆ ಬಂದು ಆಶ್ರಯ ಕೇಳಿದರು. ಇವರ ಮನೆ ಮೇಲೆ ದಾಳಿ ಮಾಡಿದ ಫೈಜುಲ್ಲಾ ಬೇಗ್‌ರ ಇಬ್ಬರು ಪತ್ನಿಯರು ಖಂಡ್ರೆಯವರ ಮನೆಗೆ ಬಂದು ಆಶ್ರಯ ಪಡೆದರು. ಸ್ವಾತಂತ್ರ್ಯ ಹೋರಾಟಗಾರರ ಎಷ್ಟೋ ವಿರೋಧದ ನಡುವೆಯೂ ಭೀಮಣ್ಣನವರು ಆ ಮಹಿಳೆಯರನ್ನು ರಕ್ಷಿಸಿ ಗೌರವಿಸಿದರು. ಇದು ಭೀಮಣ್ಣ ಖಂಡ್ರೆಯವರ ನಾಯಕತ್ವ ಗುಣಕ್ಕೆ ಹಿಡಿದ ಕನ್ನಡಿಯಾಗಿದೆ.

**ಸೇಡಿಗೆ ಸೇಡು ಸಲ್ಲದು:** ನಿಜಾಮ ಅಧಿಕಾರ ಹಸ್ತಾಂತರಿಸಿದನು. ರಜಾಕಾರ ಹಾವಳಿ ಕುಗ್ಗಿತು. 'ಸೇಡಿಗಾಗಿ ಸೇಡು' ತೀರಿಸಿಕೊಳ್ಳಲು ಹಿಂದು ಯುವಕರು ಮುಂದಾದರು. ಹಿಂದೂಗಳ ಪ್ರಾಬಲ್ಯವಿರುವ ಕಡೆಗಳಲ್ಲಿ ದ್ವೇಷ ಸಾಧಿಸುವ ಉದ್ದೇಶದಿಂದ ಯುವಕರು ಪಣತೊಟ್ಟರು. ಹಾಗಾಗಿ ಮುಸ್ಲಿಂ ಜನಾಂಗದವರ ಮೇಲೆ ಕೆಲವು ಕಡೆಗಳಲ್ಲಿ ಅನ್ಯಾಯ, ದೌರ್ಜನ್ಯಗಳು ನಡೆಯತೊಡಗಿದವು. ಇದುವರೆಗೆ ಭಾರಿ ಪ್ರಮಾಣದಲ್ಲಿ ಕ್ರೌರ್ಯ ಎಸಗಿದ್ದ ರಜಾಕಾರರು, ಪಠಾಣರು ಹಿಂದೂ ಆಕ್ರಮಣಕಾರರಿಗೆ ಹೆದರಿ ಈ ಭಾಗದಿಂದ ಪಲಾಯನ ಮಾಡಿದರು. ನಿರ್ದೋಷಿಗಳು ಇಲ್ಲಿಯೆ ಉಳಿದರು.

ಅಮಾಯಕ ಮುಸ್ಲಿಂರ ಮೇಲಾಗುತ್ತಿದ್ದ ದೌರ್ಜನ್ಯಗಳನ್ನು ಖಂಡ್ರೆಯವರಿಗೆ ಸಹಿಸಲಾಗಲಿಲ್ಲ. ಸ್ವತಃ ಕೈಯಲ್ಲಿ ಬಂದೂಕು ಹಿಡಿದುಕೊಂಡು ಅಮಾಯಕ ಮುಸ್ಲಿಂ ಕುಟುಂಬದವರಿಗೆ ರಕ್ಷಣೆ ನೀಡಿದರು. ಆಹಾರ ವಸತಿ ಸೌಲಭ್ಯಗಳನ್ನು ಕಲ್ಪಿಸಿದರು. ಕೆಲವು ಕಿಡುಗೇಡಿಗಳು ಖಂಡ್ರೆಯವರ ಮನೆ ಹತ್ತಿರವಿದ್ದ ಗುಲಾಮ್ ಮೆಹಬೂಬ್ ವಕೀಲರ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸುತ್ತಿದ್ದಾಗ ಭೀಮಣ್ಣ ಖಂಡ್ರೆಯವರು ಗಾಳಿಯಲ್ಲಿ ಗುಂಡು ಹಾರಿಸಿ ಆಗಬಹುದಾದ ಅಚಾತುರ್ಯ ತಡೆಗಟ್ಟಿದ್ದಾರೆ. ಇಂತಹ ಹಲವಾರು ಘಟನೆಗಳು ಅವರ ಭ್ರಾತೃತ್ವ ಭಾವನೆಗೆ ಹಿಡಿದ ಕನ್ನಡಿಗಳಾಗಿವೆ. ಜಾತಿ–ಮತಗಳೆಂಬ ಭೇದಭಾವ ಮಾಡದೆ ಸಮಾಜದ ಎಲ್ಲ ಹೆಣ್ಣುಮಕ್ಕಳನ್ನು ಪೂಜ್ಯತೆಯಿಂದ ಗೌರವಿಸಿದ್ದರು.

## ೧೦. ಸ್ವಾತಂತ್ರ್ಯ ಹೋರಾಟಕ್ಕೆ ಮಹಿಳೆಯರ ಕೊಡುಗೆ:

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳಾ ಹೋರಾಟಗಾರರ ಸಂಖ್ಯೆ ಪುರುಷರಿಗಿಂತ ಕಡಿಮೆಯಾಗಿದ್ದರೂ ಗುಪ್ತಗಾಮಿನಿಯಾಗಿ ಅವರು ಮಾಡಿರುವ

ಸೇವೆ ಮಹತ್ವದ್ದಾಗಿದೆ. ಹೋರಾಟದಲ್ಲಿ ಅವರು ಸವೆಸಿದ ಬದುಕು, ಜೀವನದ ರೀತಿ ಅನನ್ಯವಾಗಿದೆ. ಮಹಿಳೆಯರ ಜೀವನದಲ್ಲಿ ಗಾಂಧೀಜಿಯವರ ಅಸಹಕಾರ ಚಳುವಳಿ, ಅಹಿಂಸಾ ವ್ರತಗಳು ಮಹತ್ವದ ಪರಿಣಾಮ ಬೀರಿವೆ. ವಿದೇಶಿ ವಸ್ತುಗಳ ಬಹಿಷ್ಕಾರ, ಖಾದಿ ಪ್ರಚಾರ, ಕರ ನಿರಾಕರಣೆ, ಮದ್ಯದಂಗಡಿಗಳ ಮುಂದೆ ಅವರು ಹೂಡಿರುವ ಮುಷ್ಕರಗಳು ಬ್ರಿಟಿಷ್ ಪ್ರಭುತ್ವಕ್ಕೆ ಧಕ್ಕೆಯನ್ನುಂಟು ಮಾಡಿದ್ದವು. ಮಹಿಳೆಯರ ಪಾಲ್ಗೊಳ್ಳುವಿಕೆಯಿಂದ ಪ್ರತಿಭಟನಾ ಮೆರವಣಿಗೆಗಳು ಶಿಸ್ತಿನಿಂದ ಜರುಗುತ್ತಿದ್ದವು. ಪುರುಷರಿಗಿಂತ ಮಹಿಳೆಯರು ಭಾಗವಹಿಸಿದ ಚಳುವಳಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪರಿಣಾಮವನ್ನುಂಟು ಮಾಡುತ್ತಿದ್ದವು. ಇದರಿಂದ ಚಳುವಳಿಯ ಕಾವು ತೀವ್ರಗೊಂಡುದರ ಪರಿಣಾಮ ಸ್ವಾತಂತ್ರ್ಯ ಚಳುವಳಿಗೆ ಬಲ ಬರುತ್ತಿತ್ತು. ಪ್ರಾತಿನಿಧಿಕವಾಗಿ ಕೆಲವರನ್ನು ಗುರುತಿಸಬಹುದು.

**ಜಯದೇವಿ ತಾಯಿ ಲಿಗಾಡೆ** ಅವರು ಸೊಲಾಪುರದ ನಿವಾಸಿಗಳಾಗಿದ್ದರು. ಮುಂಬಾಯಿ ಪ್ರೆಸಿಡೆನ್ಸಿಗೆ ಸೇರಿದ್ದ ಸೊಲಾಪುರದಲ್ಲಿ ಅಷ್ಟೊಂದು ಪ್ರಮಾಣದಲ್ಲಿ ರಜಾಕಾರರ ಹಾವಳಿ ಇರಲಿಲ್ಲ. ಆದರೆ ಹೈದರಾಬಾದಿನ ನಿಜಾಮ ಸರ್ಕಾರದಲ್ಲಿ ಬೀದರ, ಕಲಬುರ್ಗಿ ಜಿಲ್ಲೆಯ ಹಲವು ಗ್ರಾಮಗಳಲ್ಲಿ ರಜಾಕಾರರು ಲೂಟಿ, ಕೊಲೆ ಮಾಡುತ್ತ ಅಟ್ಟಹಾಸದಿಂದ ವರ್ತಿಸುತ್ತಿದ್ದರು. ಮಹಿಳೆಯರ ದೌರ್ಜನ್ಯ ಎಸಗುತ್ತಿದ್ದರು. ಆಸ್ತಿ ಪಾಸ್ತಿಗಳಿಗೆ ಹಾನಿಯನ್ನುಂಟು ಮಾಡುತ್ತಿದ್ದರು.

ವಿವಿಧ ಸಂದರ್ಭದಲ್ಲಿ ಜಿಲ್ಲೆಯ ಹಲವು ಗ್ರಾಮಗಳ ಜನರು ರಜಾಕಾರ ಹಾವಳಿಯಿಂದ ಸಂತ್ರಸ್ತರಾಗಿದ್ದರು. ಹೀಗೆ ತೊಂದರೆ ಅನುಭವಿಸಿ ನಿರಾಶ್ರಿತರಾದ ಸಾವಿರಾರು ಜನರಿಗೆ ಜಯದೇವಿತಾಯಿ ಲಿಗಾಡೆ ಅವರು ತಮ್ಮ ಸ್ವಂತ ವಾಡೆಯಲ್ಲಿ ಮತ್ತು ೪೦ ಎಕರೆ ಇರುವ ಲಿಂಗದ ಹೊಲದಲ್ಲಿ ಉಳಿದುಕೊಳ್ಳಲು ವ್ಯವಸ್ಥೆ ಮಾಡಿದರು. ಸೊಲ್ಲಾಪುರ ನಿವಾಸಿಗಳ, ದಾನಿಗಳ ನೆರವಿನೊಂದಿಗೆ ೫೫೦ ಎಕರೆಯಷ್ಟು ಪ್ರದೇಶದಲ್ಲಿ ನಿರಾಶ್ರಿತರ ಶಿಬಿರಗಳನ್ನು ನಿರ್ಮಿಸಿದರು. ತಾಯಿ ಸಂಗವ್ವಬಾಯಿಯವರೊಂದಿಗೆ ಸೇರಿ ಸಾವಿರಾರು ಮಹಿಳೆಯರ ಬಾಣಂತನ ಮಾಡಿದರು. ಆರೋಗ್ಯದ ಬಗ್ಗೆ ಅವರಿಗೆ ತಿಳುವಳಿಕೆ ನೀಡಿದರು. ವಿದ್ಯೆಯಿಂದ ವಂಚಿತರಾದವರಿಗೆ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಿದರು. ನಿರಾಶ್ರಿತರಾದವರಿಗೆ ಆಶ್ರಯ ಕಲ್ಪಿಸಿದ್ದರು. ಕಾರ್ಮಿಕರ ಮಕ್ಕಳಿಗೆ ಜೀವನಾಶ್ಯಕ ಸೌಲಭ್ಯಗಳನ್ನು ಒದಗಿಸಿದ್ದರು. ವಯಸ್ಕರರಿಗೆ ವಿದ್ಯಾರ್ಜನೆಯ ಅವಕಾಶ ಒದಗಿಸಿಕೊಟ್ಟು ಸಾಕ್ಷರರನ್ನಾಗಿಸಿದರು. ಹೀಗೆ ಅನ್ನ ಬಟ್ಟೆ ಅರಿವು ಒದಗಿಸಿಕೊಟ್ಟು ಆಶ್ರಯ ನೀಡಿದ್ದು ಜಯದೇವಿತಾಯಿ ಲಿಗಾಡೆಯವರ ಮಹತ್ವದ ಸೇವೆಯಾಗಿದೆ.



**ಸಿದ್ಧಮ್ಮ ಚನ್ನಬಸಪ್ಪ ಆಗರೆ ಮೇಹಕರ** ಇವರು ಬೀದರ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಧೀಮಂತ ಮಹಿಳೆಯಾಗಿದ್ದಾರೆ. ರಜಾಕಾರರು ಮೇಹಕರ ಗ್ರಾಮದಲ್ಲಿ ಆಕ್ರಮಣ, ಲೂಟಿ ಕಾರ್ಯದಲ್ಲಿ ನಿರತರಾಗಿದ್ದಾಗ ಅವರನ್ನು ಧೈರ್ಯದಿಂದ ಎದುರಿಸಿ ಹೋರಾಟ ಮಾಡಿದ್ದಾರೆ. ತಮ್ಮ ಎದುರಿನಲ್ಲಿಯೇ ಗ್ರಾಮದ ಅಪ್ಪಾರಾವ ಪಾಟೀಲ ಬೋಳೆಗಾಂವ, ಸಮರ್ಥ ಬಿರಾದಾರ ನಾರದಾಸಂಗಮ, ಜ್ಞಾನೋಬಾ ಗಾವಂಡಿ ಮತ್ತು ಮಧು ಹೂಸಾರೆ ಸಾವನ್ನಪ್ಪಿದಾಗ ಹೋರಾಟಕ್ಕೆ ಅಣಿಯಾದರು. ಕೈಯಲ್ಲಿ ತಲವಾರ ಹಿಡಿದು ರಜಾಕಾರರೊಂದಿಗೆ ಮುಖಾಮುಖಿಯಾದರು. ಸಿದ್ಧಮ್ಮಾ ಆಗರೆಯವರನ್ನು ಬೆಂಬಲಿಸಿ ಇತರ ಮಹಿಳೆಯರು ಕಲ್ಲು ಕಟ್ಟಿಗೆಯ ತುಂಡನ್ನು ರಜಾಕಾರರ ಮೇಲೆ ಎಸೆದರು. ಸಿದ್ಧಮ್ಮಾ ಆಗರೆಯವರು ಹೋರಾಡುತ್ತಿದ್ದಾಗ ಅವರ ಬಲಗೈಯ ನಾಲ್ಕು ಬೆರಳುಗಳು ಕತ್ತರಿಸಿಹೋದವು. ಆದರೂ ರಜಾಕಾರರ ಮೇಲೆ ಆಕ್ರಮಣ ಮಾಡುವುದನ್ನು ನಿಲ್ಲಿಸಲಿಲ್ಲ. ಆಮೇಲೆ ಸಾಯಗಾಂವ, ಬೇಲೂರು, ಹುಲಸೂರು, ಘೋಡವಾಡಿ, ವರವಟ್ಟಿ, ಮಿರ್ಖಲ್ ಮೊದಲಾದ ಗ್ರಾಮದ ಕಿಶಾನ ದಲ ಕಾರ್ಯಕರ್ತರು ಮೇಹಕರಗೆ ಆಗಮಿಸಿ ರಜಾಕಾರರನ್ನು ಹಿಮ್ಮೆಟ್ಟಿಸಿದರು.

ಬಸವರಾಜ ಹುಡಗೆ ಬಗದಲ್ ಅವರು ಗೋವಾ ಮುಕ್ತಿ ಆಂದೋಲನದಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅವರಿಗೆ ಸಹಾಯಕರಾಗಿ ಪಂ. ಗೋಪಾಲದೇವ ಶಾಸ್ತ್ರಿಯವರು ಮಲ್ಲಶೆಟ್ಟಪ್ಪ ಚೆನ್ನಬಸವಪ್ಪ ಬುಳ್ಳಾ ನಿರ್ಣಾ, ಅಂಬಾದಾಸರಾವ ಸೇರಿದಂತೆ ೧೫ ಜನ ಸಕ್ರಿಯ ಕಾರ್ಯಕರ್ತರೊಂದಿಗೆ ಭಾಗವಹಿಸಿದ್ದರು. ಮೇಥಿಮೇಳಕುಂದಿಯ ಅಂಬಾದಾಸರಾವ ಗುಂಡೇರಾವ ಕುಲಕರ್ಣಿಯವರ ಪತ್ನಿ ಶ್ರೀಮತಿ **ದ್ರೌಪದಿದೇವಿಯು**ವರೂ ಪತಿಯೊಂದಿಗೆ ಗೋವಾ ಹೋರಾಟದಲ್ಲಿ ಭಾಗವಹಿಸಿದ್ದರು ಎಂಬುದು ಹೆಮ್ಮೆಯ ಸಂಗತಿಯಾಗಿದೆ.

ಆರ್ಯ ಸಮಾಜದ ವಿಚಾರಧಾರೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದ **ಶ್ರೀಮತಿ ಶಾರದಾಬಾಯಿ ಅಂಬಣ್ಣ ಗೋಗೊಜಿ**ಯವರು ಮಹಿಳೆಯರ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದರು. ದಂಗೆಯೊಂದರಲ್ಲಿ ಭಾಗವಹಿಸಿದ್ದ ಇವರ ಪತಿ ಅಂಬಣ್ಣ ಗೋಗೊಜಿಯವರನ್ನು ನಿಜಾಂ ಪೊಲೀಸರು ಬಂಧಿಸಿದಾಗ ಇವರು ಎಳ್ಳಷ್ಟು ಎದೆಗುಂದಲಿಲ್ಲ. ಸಾಮಾಜಿಕವಾಗಿ ಮಹಿಳೆಯರನ್ನು ಸಬಲೀಕರಣಗೊಳಿಸುತ್ತ, ಸ್ವಾತಂತ್ರ್ಯ ಯೋಧರನ್ನು

ಬೆಂಬಲಿಸುತ್ತಿದ್ದರು. **ಆನಂದಿಬಾಯಿ ಅಂಬಾನಗರ** ಅವರು ಅಟ್ಟರ್ಗಾ ಟೋಳಿಯಲ್ಲಿದ್ದರು.

ಬ್ರಿಟಿಷ್ ಸರ್ಕಾರವು ಮಹಿಳೆಯರನ್ನು ಶಿಕ್ಷಿಸುವುದರ ಮೂಲಕ ಅವರನ್ನು ಹತ್ತಿಕ್ಕಲು ಪ್ರಯತ್ನಿಸುತ್ತಿತ್ತು. ಮಹಿಳೆಯರನ್ನು ಬೈಯುವ, ಅವಮಾನಿಸುವ, ಶಿಕ್ಷೆ ವಿಧಿಸುವ ಕಾರ್ಯ ಮಾಡಿ ಅವರ ಧೈರ್ಯವನ್ನು ಕುಗ್ಗಿಸುತ್ತಿತ್ತು. ಶಿಕ್ಷೆಯ ಪ್ರಮಾಣವನ್ನು ಲೆಕ್ಕಿಸದೆ ಮಹಿಳೆಯರು ದೇಶದ ಸ್ವಾತಂತ್ರ್ಯಕ್ಕಾಗಿ ಸಾಮೂಹಿಕ ಸಂಘಟನೆಯಲ್ಲಿ ತೊಡಗಿಸಿಕೊಂಡದ್ದು, ವೈಯಕ್ತಿಕ ಹಿತಕ್ಕಿಂತ ದೇಶದ ಹಿತವೇ ಮುಖ್ಯವೆಂದು ಭಾವಿಸಿದ್ದು ಸ್ವಾತಂತ್ರ್ಯದ ಪೂರ್ವದ ಸಂದರ್ಭದಲ್ಲಿ ನಿಂತು ನೋಡಿದಾಗ ಸಾಮಾನ್ಯ ಸಂಗತಿಯೇನಲ್ಲ! ಹೋರಾಟದ ಬಗೆಗಿನ ಅವರ ನಿಲುವು, ತ್ಯಾಗ, ಸೇವಾಭಾವದಿಂದಾಗಿ ಮಹಿಳೆಯರು ಇಂದಿಗೂ ಚಿರಸ್ಮರಣೀಯರಾಗಿದ್ದಾರೆ.

## ೧೧. ಆಪರೇಷನ್ ಪೋಲೋ:

೧೯೪೭ರ ಆಗಸ್ಟ್ ೧೫ರಂದು ಭಾರತ ದೇಶವು ಸ್ವತಂತ್ರವಾಯಿತು. ಅನೇಕ ದೇಶಿ ಸಂಸ್ಥಾನಗಳು ಸ್ವಇಚ್ಛೆಯಿಂದ ಭಾರತದಲ್ಲಿ ವಿಲೀನವಾದವು. ಆದರೆ ಜಮ್ಮು ಕಾಶ್ಮೀರದ ಪ್ರತ್ಯೇಕತಾವಾದಿಗಳು, ಸೌರಾಷ್ಟ್ರದಲ್ಲಿದ್ದ ಜುನಾಗಢದ ದಿವಾನ ಮುಸ್ಲಿಂ ಲೀಗನ ಶಾಹನವಾಜ್ ಭುಟ್ಟೋ ಮತ್ತು ಹೈದ್ರಾಬಾದ್ ನಿಜಾಮರು ಭಾರತದ ಒಕ್ಕೂಟವನ್ನು ಸೇರಲು ನಿರಾಕರಿಸಿದರು.

ಶಾಹನವಾಜ್ ಭುಟ್ಟೋ ಮತ್ತು ಇತರರಿಂದ ಪಾಠ ಕಲಿಯದ ಮೀರ್ ಉಸ್ಮಾನ ಅಲಿಖಾನ್ ಹೈದ್ರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಒಪ್ಪಲಿಲ್ಲ. ಏಕೆಂದರೆ ರಾಜಕೀಯವಾಗಿ ಇಂಗ್ಲೆಂಡ್ ಸಾಮ್ರಾಜ್ಯಕ್ಕೆ ಆಪ್ತಮಿತ್ರನಾಗಿದ್ದ ನಿಜಾಮನಿಗೆ ಮೌಂಟ್ ಬ್ಯಾಟನ್ ಬೆಂಬಲವಿತ್ತು. ಜವಾಹರಲಾಲ ನೆಹರೂಜಿಯವರಿಗೆ ಕಾಶ್ಮೀರದ ಮೋಹವಿದ್ದಂತೆ ಮೌಂಟ್ ಬ್ಯಾಟನ್‌ನಿಗೆ ಹೈದ್ರಾಬಾದಿನ ಬಗ್ಗೆ ಮೋಹವಿತ್ತು. ಇದರ ಜೊತೆಗೆ ಮೀರ ಉಸ್ಮಾನ್ ಅಲಿಖಾನ್‌ನಿಗೆ ೧೯೪೨ರಲ್ಲಿ ನಿಜಾಂ ಸರ್ಕಾರದಲ್ಲಿ ಅರ್ಥಮಂತ್ರಿಯಾಗಿ ನೇಮಕಗೊಂಡಿದ್ದ ಬಿ. ಶ್ಯಾಮಸುಂದರ್ ಮತ್ತು ನಿಜಾಮರ ಆಡಳಿತದಲ್ಲಿ ರಜಾಕಾರ ಪಡೆಯ ಮುಖ್ಯಸ್ಥನಾಗಿದ್ದ, ಮುಸ್ಲಿಂ ಆಧಿಪತ್ಯಕ್ಕಾಗಿ ಸೆಣಸುತ್ತಿದ್ದ ಮಜ್‌ಲೀಸ್ ಎ ಇತ್ತೆಹಾದುಲ್ ಮುಸಲ್ಮೀಗ್ ಸಂಘಟನೆಯ ಪ್ರಮುಖನೂ ಆಗಿದ್ದ ಲಾತೂರಿನ ವಕೀಲ ಕಾಸಿಂ ರಜ್ವಿಯ ನೇರವಾದ ಸಹಕಾರವಿತ್ತು.



ಪೊಲೀಸ್ ಮತ್ತು ರಜಾಕಾರ ಪಡೆಯ ವಿಷಯದಲ್ಲಿ ಸ್ವಯಂನಿರ್ಣಯ ಕೈಗೊಳ್ಳುವಷ್ಟು ಆತ ಬಲಾಢ್ಯನಾಗಿದ್ದನು.

ರಜಾಕಾರರು ಗೋರ್ಟಾ, ಮುಚಳಂಬ, ಹೊನ್ನಳ್ಳಿ, ಹಾಳಗೋರ್ಟಾ, ಘೋಡವಾಡಿ, ಗೌಡಗಾಂವ, ಕೇಸರಜವಳಗಾ, ಸಾಯಗಾಂವ, ಬೋಳೆಗಾಂವ, ವರವಟ್ಟಿ, ಭಾಲ್ಕಿ, ಆನಂದವಾಡಿ, ಮೆಹಕರ, ಹುಪಳಾ, ಲಂಜವಾಡ, ಭಾಟಸಾಂಗವಿ, ಹಲಸಿ (ಎಲ್.), ಕಾಸರತುಗಾಂವ, ಅಟ್ಟರ್ಗಾ ಮುಂತಾದ ಭಾಗದಲ್ಲಿ ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರ, ಕೊಲೆ, ಸುಲಿಗೆ, ಲೂಟಿ ಮಾಡುತ್ತ, ಮುಗ್ಧಜನರ ಮಾರಣಹೋಮ ಗೈದಿದ್ದರು. ಇಂತಹ ಹಲವು ಘಟನೆಗಳಿಂದ ನಿಜಾಮ ಆಡಳಿತ ಮತ್ತಷ್ಟು ಕಳಂಕಿತಗೊಂಡಿತು. ಜನರಿಂದ ತಿರಸ್ಕಾರ ಕ್ಕೊಳಗಾಯಿತು. ಬಹುಸಂಖ್ಯಾತರಾದ ಹಿಂದುಗಳು ತಮ್ಮ ಅಸ್ತಿತ್ವ ಉಳಿಸಿಕೊಳ್ಳಲು ಹೋರಾಟಕ್ಕೆ ಅಣಿಯಾಗಬೇಕಾಯಿತು. ಆದರೆ ಸಶಸ್ತ್ರ ಪಡೆಯ ಮುಂದೆ ಹಿಂದುಗಳು ಬಲಹೀನರಾದರು. ಜೀವ ಉಳಿಸಿಕೊಳ್ಳಲು ಸೊಲ್ಲಾಪುರ ಮೊದಲಾದ ಕಡೆಗೆ ಪಲಾಯನ ಮಾಡಬೇಕಾಯಿತು.

ಸ್ಥಳೀಯವಾಗಿ ಹೈದರಾಬಾದ್ ಸ್ಟೇಟ್ ಕಾಂಗ್ರೆಸ್ ನಾಯಕರಾದ ರಮಾನಂದ ತೀರ್ಥ, ಗೋವಿಂದಭಾಯಿ ಶ್ರೀಫ್, ಜನಾರ್ದನರಾವ ದೇಸಾಯಿ, ಕ್ಯಾಪ್ಟನ್ ರವಿ ನಾರಾಯಣ ರೆಡ್ಡಿ, ಕ್ಯಾಪ್ಟನ್ ಮಗ್ದೂಮ ಮೊಯಿನೊದ್ದೀನ್, ಡಾ. ಜಯಸೂರ್ಯ ನಾಯಿಡು, ಪಂಡಿತ ನರೇಂದ್ರಜಿ, ಪಂಡಿತ ವಿನಾಯಕರಾವ ವಿದ್ಯಾಲಂಕಾರ, ಬಿ. ರಾಮಕೃಷ್ಣರಾವ ಪ್ರಮುಖರು. ಇವರೆಲ್ಲರು ಜನತೆಯ ಮೇಲೆ ಆಗುತ್ತಿರುವ ದಬ್ಬಾಳಿಕೆಯ ಕುರಿತು ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಪಂಡಿತ ಜವಾಹರಲಾಲ್ ನೆಹರೂ, ಮೌಲಾನಾ ಆಜಾದ ಮತ್ತು ಗೃಹಮಂತ್ರಿ ಸರದಾರ್ ವಲ್ಲಭಭಾಯಿ ಪಟೇಲರನ್ನು ಸಂಪರ್ಕಿಸಿ ಮಾಹಿತಿ ನೀಡುತ್ತಿದ್ದರು. ಜನತೆಯ ಆಶೋತ್ತರಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಹೈದರಾಬಾದ ಸಂಸ್ಥಾನದ ವಿರುದ್ಧ ಕ್ರಮ ಕೈಗೊಂಡು ಭಾರತದ ಒಕ್ಕೂಟದಲ್ಲಿ ಸೇರ್ಪಡೆಗೊಳಿಸಲು ವಿನಂತಿಸಿಕೊಂಡರು. ಇದರ ಪರಿಣಾಮವಾಗಿ ಸರದಾರ ವಲ್ಲಭಭಾಯಿ ಪಟೇಲರು ಕಠಿಣ ನಿರ್ಧಾರ ಕೈಗೊಂಡು ಹೈದರಾಬಾದ ಸಂಸ್ಥಾನದ ಮೇಲೆ ೧೯೪೮ರ ಸಪ್ಟೆಂಬರ್ ೧೩ರಿಂದಲೇ ಎಲ್ಲ ದಿಕ್ಕುಗಳಿಂದ 'ಆಪರೇಷನ್ ಪೋಲೋ' ಹೆಸರಿನ ಪೊಲೀಸ್ ಕಾರ್ಯಾಚರಣೆ ನಡೆಸಲು ಆದೇಶ ನೀಡಿದರು.

ನಿಜಾಮ ಸಂಸ್ಥಾನದ ಮೇಲೆ ಕಾರ್ಯಾಚರಣೆ ನಡೆಸುವ ಮುನ್ನ ಮಿಲಿಟರಿ ಅಧಿಕಾರಿಗಳು ಸೊಲ್ಲಾಪುರದಲ್ಲಿ ಹೈದ್ರಾಬಾದ ಸ್ಟೇಟ್ ಕಾಂಗ್ರೆಸ್ ಮುಖಂಡರ ಸಭೆಯನ್ನು ಗಿರಜಿ ಮಿಲ್‌ನಲ್ಲಿ ಕರೆದಿದ್ದರು. ಆ ಸಭೆಯಲ್ಲಿ ಬೀದರಿನ ರಂಗನಾಥರಾವ ಸಾಯಗಾಂವಕರ, ಬಂಡೆಪ್ಪ ವಕೀಲ, ನ್ಯಾಯವಾದಿ ಶೇಷರಾವ ವಾಘಮಾರೆ, ಮಾಣಿಕರಾವ ಘುಲೇಕರ, ನ್ಯಾಯವಾದಿ ಗುಂಡೇರಾವ ಎರೋಳಕರ, ಯಶವಂತರಾವ ಸಾಯಗಾಂವಕರ ಪಾಲ್ಗೊಂಡಿದ್ದರು.

ರಾಷ್ಟ್ರೀಯ ಹೆದ್ದಾರಿ ೯ರ ಮುಖಾಂತರ ಹೊರಟ ಸೇನಾ ಟ್ಯಾಂಕರ್‌ಗಳು ಉಸ್ಮಾನಾಬಾದ ಸರಹದ್ದು ದಾಟಿದ ಮೇಲೆ ಕರೋಡಗಿರಿ ನಾಕಾ, ಆಣದೂರದಲ್ಲಿ ೮ ರಿಂದ ೧೦ ಗಂಟೆಗಳವರೆಗೆ ಭಾರೀ ಪ್ರಮಾಣದಲ್ಲಿ ಎರಡೂ ಗುಂಪುಗಳ ನಡುವೆ ಯುದ್ಧ ಜರುಗಿತು. ಎರಡೂ ಸೇನೆಗಳ ಮುಖಾಮುಖಿಯಲ್ಲಿ ಬಹಳಷ್ಟು ಜನರು ಸಾವನ್ನಪ್ಪಿದರು. ಸೋತು ಪಲಾಯನ ಮಾಡುತ್ತಿದ್ದ ರಜಾಕಾರರನ್ನು ಹಿಡಿದು ಬಂಧಿಸಲಾಯಿತು. ತರುವಾಯ ಭಾರತೀಯ ಸೇನೆಯು ನಳದುರ್ಗ ಕೋಟೆ, ಉಮ್ಮರ್ಗಾ, ತುರೂರಿ, ಚಂಡಕಾಪೂರ, ಬಸವಕಲ್ಯಾಣ ಕೋಟೆ ಸುತ್ತಲಿನ ಪ್ರದೇಶದ ಮೇಲೆ ಹಿಡಿತ ಸಾಧಿಸಿತು.

ಭಾರತೀಯ ಸೈನಿಕರು ಅತ್ಯಂತ ಉತ್ಸಾಹದಿಂದಿದ್ದು ಬಸವಕಲ್ಯಾಣದಿಂದ ರಾಜೇಶ್ವರ, ಹುಮನಾಬಾದ ಮಾರ್ಗವಾಗಿ ಜಹಿರಾಬಾದ ಕಡೆಗೆ ಸಾಗಿದರು. ಜಹಿರಾಬಾದ ಮುಖ್ಯ ರಸ್ತೆಯಲ್ಲಂತೂ ಸಾವಿರಾರು ಜನರು ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದು ಸೇನೆಗೆ ಸ್ವಾಗತ ಬಯಸಿದರು. ಸಂಗಾರೆಡ್ಡಿಯಂತಹ ಕೆಲವು ಕಡೆಗಳಲ್ಲಿ ವ್ಯಕ್ತವಾದ ಸಣ್ಣಪುಟ್ಟ ವಿರೋಧಗಳನ್ನು ಅಡಗಿಸುತ್ತ, ಜಯ ಸಾಧಿಸುತ್ತ ೧೯೪೮ರ ಸಪ್ಟೆಂಬರ್ ೧೬ರಂದು ಭಾರತೀಯ ಸೇನೆ ಹೈದರಾಬಾದ ನಗರದಲ್ಲಿ ಪ್ರವೇಶಿಸಿತು.

ಕಾಸಿಂ ರಜವಿಯ ಒಕ್ಕೂಟ ವಿರೋಧಿ ಸಂದೇಶಕ್ಕೆ ಪ್ರತಿಯಾಗಿ ಜಯಂತನಾಥ ಚೌಧರಿ, ಕೆ. ಎಂ. ಮುನ್ಶಿಯವರ ಪರಸ್ಪರ ಸಮಾಲೋಚನೆಗೈದರು. ಸರದಾರ ವಲ್ಲಭಭಾಯಿ ಪಟೇಲ್, ಜೆ. ಎನ್. ಚೌಧರಿಯವರ ಸಲಹೆ ಕುರಿತಂತೆ ಮೀರ್ ಉಸ್ಮಾನ ಅಲಿಖಾನ್, ನಿಜಾಮ್ ಸೇನೆಯ ಮುಖ್ಯಸ್ಥ ಎಲ್. ಇದ್ರಿಸ್ ಮತ್ತಿತರ ಪ್ರಮುಖರು ವಿಚಾರ ವಿನಿಮಯ ನಡೆಸಿ ೧೯೪೮ರ ಸಪ್ಟೆಂಬರ್ ೧೭ರ ಸಾಯಂಕಾಲ ೫ ಗಂಟೆಗೆ ಒಕ್ಕೂಟದಲ್ಲಿ ಸೇರ್ಪಡೆಗೊಂಡರು. ೧೯೪೮ರ ಸಪ್ಟೆಂಬರ್ ೧೩ ರಿಂದ ೧೭ರವರೆಗೆ ನಡೆದಿರುವ ೧೦೯ ಗಂಟೆಗಳ ಕಾರ್ಯಾಚರಣೆಯಲ್ಲಿ ನಿಜಾಂ ಸೈನಿಕರು ಸೇರಿದಂತೆ ೧೨೦೦ ರಜಾಕಾರರು



ಕೊಲ್ಲಲ್ಪಟ್ಟಿದ್ದರು. ೪೫೦ ರಜಾಕಾರರು ಬಂಧಿಸಲ್ಪಟ್ಟಿದ್ದರು. ಈ ಕಾರ್ಯಾಚರಣೆಯಲ್ಲಿ ೧೦ ಭಾರತೀಯ ಸೈನಿಕರು ಹುತಾತ್ಮರಾದರು ಎಂದು ಯಶವಂತರಾವ ಸಾಯಗಾಂವಕರ್ ಉಲ್ಲೇಖಿಸಿದ್ದಾರೆ. ಸ್ವಾಮಿ ರಾಮಾನಂದ ತೀರ್ಥರು ಹೈದ್ರಾಬಾದ ಕರ್ನಾಟಕ ವಿಮೋಚನಾ ಹೋರಾಟಕ್ಕೆ ಜೀವ ತುಂಬಿದರೆ, ಸರದಾರ್ ವಲ್ಲಭಭಾಯಿ ಪಟೇಲ್ ತಾರ್ಕಿಕ ಅಂತ್ಯ ಹಾಡಿದರು.

## ಉಪಸಂಹಾರ:

೧೮೫೭ರ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಅಂತಿಮ ಕಹಳೆ ಮೊಳಗಿದ ಘಟನೆ ಬೀದರ ಜಿಲ್ಲೆಯ ಭಾಲ್ಕಿ ಸಮೀಪದ ಅಷ್ಟಿಯಲ್ಲಿ ಜರುಗಿದ್ದು ಐತಿಹಾಸಿಕ ಸಂಗತಿಯಾಗಿದೆ. ಇದರ ಬಗ್ಗೆ ಚರಿತ್ರೆಯಲ್ಲಿ ಹೆಚ್ಚಿನ ಮಾಹಿತಿ, ಅಧಿಕೃತ ದಾಖಲೆಗಳು ಸಿಗುವುದಿಲ್ಲ. ಈ ಹಿನ್ನೆಲೆಯ ಹಲವು ಅಂಶಗಳನ್ನು ಪಟ್ಟಿಮಾಡಿಕೊಂಡು ಸಂಶೋಧನ ಅಧ್ಯಯನದ ಮೂಲಕ ಕಂಡುಕೊಂಡು ಮಾಹಿತಿಯನ್ನು ಚರಿತ್ರೆಯೊಂದಿಗೆ ಮುಖಾಮುಖಿಗೊಳಿಸಲಾಗಿದೆ. ಅದಕ್ಕಿಂತ ಮುಖ್ಯವಾಗಿ ಭಾಲ್ಕಿ, ಬೀದರ ಸುತ್ತಲಿನ ಜನರು ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಏಕೆ? ಮತ್ತು ಹೇಗೆ? ಎಲ್ಲೆಲ್ಲಿ ಪಾಲ್ಗೊಂಡಿದ್ದರು ಎಂಬುದನ್ನು ದಾಖಲಿಸಲು ಸಾಧ್ಯವಾದಷ್ಟು ಪ್ರಯತ್ನಿಸಲಾಗಿದೆ. ಇದೊಂದು ನಿರಂತರ ಪ್ರಕ್ರಿಯೆಯಾಗಿದೆ. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ಆಗಬೇಕಾದದ್ದು ತುರ್ತಿನ ವಿಷಯವಾಗಿದೆ. ಸ್ವಾತಂತ್ರ್ಯ ಸೇನಾನಿಗಳಿಗೆ, ಅವರ ಕುಟುಂಬದ ಸದಸ್ಯರಿಗೆ ಗೌರವಿಸುತ್ತ ಹೆಮ್ಮೆ ಪಡಬೇಕಾಗಿದೆ.

## ೧೨. ಭಾಲ್ಕಿ ತಾಲ್ಲೂಕಿನ ಸ್ವಾತಂತ್ರ್ಯ ಹೋರಾಟಗಾರರು:

ತಾಲ್ಲೂಕಾ ಮತ್ತು ಜಿಲ್ಲಾ ಆಡಳಿತವು ಪ್ರತಿ ವರ್ಷ ಸ್ವಾತಂತ್ರ್ಯ ಹೋರಾಟಗಾರರನ್ನು ಮತ್ತು ಅವರ ಕುಟುಂಬದ ಒಬ್ಬ ಸದಸ್ಯರನ್ನು ಗೌರವಿಸುತ್ತಿದೆ. ರಾಮರಾವ ಕುಲಕರ್ಣಿಯವರು ತಾಲೂಕಿನ ಸ್ವಾತಂತ್ರ್ಯ ಹೋರಾಟಗಾರರ ಅಧ್ಯಕ್ಷರಾಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

೧. ಅಂಬಾದಾಸರಾವ ಗುಂಡೇರಾವ ಕುಲಕರ್ಣಿ ಮೇಥಿ ಮೇಳಕುಂದಾ

೨. ಅಪ್ಪಾರಾವ ಪಾಟೀಲ ಬೊಳೆಗಾಂವ

೩. ಆತ್ಮಾರಾಮ ಮೆಹಕರ ಅಟ್ಟರ್ಗಾ

೪. ಏಕನಾಥ ಸಾಯಬಾ ಪವಾರ ಸಾಯಗಾಂವ

೫. ಕಾಶಪ್ಪ ಗುರುಪಾದಪ್ಪ ನಿಟ್ಟೂರೆ ಮೆಹಕರ

೬. ಗಣಪತರಾವ ಸೌದಾಜಿ ಸಾಗಾಂವೆ ಅಟ್ಟರ್ಗಾ

೭. ಗುರುಲಿಂಗಪ್ಪ ಪಾಟೀಲ ಕೆಸರ ಜವಳಗಾ

೮. ಗುರುಲಿಂಗಪ್ಪ ವೀರಭದ್ರಪ್ಪ ಮೋದಿ ಧನ್ನೂರಾ

೯. ಗೋವಿಂದ ನರಸಿಂಗರಾವ ಸದಾನಂದೆ ಮೆಹಕರ

೧೦. ಗೋವಿಂದರಾವ ವಿಠೋಬಾ ಬಿರಾದಾರ ಅಟರ್ಗಾ

೧೧. ಚೆನ್ನಪ್ಪ ಡಾಕ್ಟರ್ ಕಾಸರತುಗಾಂವ

೧೨. ಜಗನ್ನಾಥ ವೈಜಿನಾಥ ನಾಯಕ ಭಾಲ್ಕಿ

೧೩. ಜನಾರ್ದನ ದೇವರಾವ ಅಟ್ಟರ್ಗಾ

೧೪. ತುಕಾರಾಮ ಆನಂದರಾವ ವಾಕಸೆ ಸಾಯಗಾಂವ

೧೫. ತುಕಾರಾಮ ಗಂಗಾರಾಮ ಪಾಟೀಲ ಮಾಣಕೇಶ್ವರ

೧೬. ತುಳಸಿರಾಮ ಭಾಂಗೆ ಭಾಲ್ಕಿ

೧೭. ತುಳಸಿರಾಮ ಮಗರ ಮಾಣಕೇಶ್ವರ

೧೮. ತ್ರಿಂಬಕ ಕಾಂಬಳೆ ಕಾಸರತುಗಾಂವ

೧೯. ದತ್ತು ಗಂಗಾರಾಮ ಪಾಟೀಲ ಮಾಣಕೇಶ್ವರ

೨೦. ದಾದಾರಾವ ಬಗದೂರೆ ವಾಂಜರಖೇಡ

೨೧. ದಿವಾಕರ ಶಂಕರ ಶಾಸ್ತ್ರಿ ಭಾಲ್ಕಿ

೨೨. ದೇಶಮುಖಪ್ಪ ವಿರುಪಾಕ್ಷಪ್ಪ ಹೊನ್ನಾ ಭಾಲ್ಕಿ

೨೩. ದೌಲತರಾವ ಭಾಲ್ಕೆ ಮೆಹಕರ

೨೪. ದೃಷ್ಟದುಮ್ನ ಝುಟಿಂಗರಾವ ಗಣೂರೆ ಭಾಲ್ಕಿ

೨೫. ಧೂಳಪ್ಪ ಮಲ್ಲಪ್ಪ ಕಾಂಬಳೆ ಹೊನ್ನಳ್ಳಿ



೨೬. ಧೂಳಪ್ಪ ಮಡೆಪ್ಪ ಗುಳಶೆಟ್ಟಿ ದಾಡಗಿ

೨೭. ಧೊಂಡಿಬಾ ಹುಪಳೆ ಕಾಕನಾಳ

೨೮. ನರಸಿಂಗರಾವ ಮಾಧವರಾವ ಹಾಸೂರೆ ಮೆಹಕರ

೨೯. ನರಸಿಂಗರಾವ ಕಲಾಲ ಮೆಹಕರ

೩೦. ನಾಗೋರಾವ ಬಿರಾದಾರ ಸಾಯಗಾಂವ

೩೧. ನಾನಾರಾವ ಕಾನೋಜಿ ಬೊಳೆಗಾಂವ

೩೨. ನಾರಾಯಣರಾವ ನಾಗೋರಾವ ದೇಶಪಾಂಡೆ ಸಾಯಗಾಂವ

೩೩. ನಾರಾಯಣರಾವ ಪಂಢರಿನಾಥರಾವ ಪವಾರ ಸೋಲದಾಬಕಾ

೩೪. ನಿವೃತ್ತಿ ಭಾಲ್ಕೆ ಮೆಹಕರ

೩೫. ನಿವೃತ್ತಿ ಯಶವಂತರಾವ ಅಟ್ಟರ್ಗಾ

೩೬. ಪ್ರಹ್ಲಾದ ಗಂಗಾರಾಮ ಶರ್ಮಾ, ಭಾಲ್ಕಿ

೩೭. ಪಾಂಡುಜಿ ಭೀಮರಾವ ಮಗರ (ಪಾಟೀಲ) ಮಾಣಕೇಶ್ವರ

೩೮. ಪಾಂಡುಜಿ ಮಾಧವರಾವ ಅಟ್ಟರ್ಗಾ

೩೯. ಪಾಂಡುರಂಗ ಸದಾಶಿವ ಆರ್ಯ ಮೆಹಕರ

೪೦. ಬಳಿರಾಮ ನರಸಿಂಗರಾವ ಬಿರಾದಾರ, ಅಂಬೆಸಂಗವಿ

೪೧. ಬಳಿರಾಮ ತುಳಸಿರಾಮ ಮಾನಕರಿ, ಅಂಬೆಸಂಗವಿ

೪೨. ಬಾಬಾರಾವ ಪಾಟೀಲ ಹೊನ್ನಳ್ಳಿ

೪೩. ಬಾಬುರಾವ ಪಾಟೀಲ ಮೊರಂಬಿ

೪೪. ಬಾಬುರಾವ ಅಟ್ಟರ್ಗಾ

೪೫. ಬಾಬುರಾವ ತ್ರಿಂಬಕ ಪಾಟೀಲ ಗುಂಜರ್ಗಾ

೪೬. ಬಾಳಾರಾಮ ಘುಲಾರಿ ಭಾಲ್ಕಿ

೪೭. ಭಾವುರಾವ ಏಕನಾಥರಾವ ಪಾಟೀಲ ಹೊನ್ನಳ್ಳಿ

೪೭. ಭೀಮರಾವ ಮಾಣಿಕರಾವ ಚಿಟಗುಪ್ಪಾಕರ ಭಾಲ್ಕಿ
೪೮. ಭೀಮಣ್ಣ ಖಂಡ್ರೆ, ಭಾಲ್ಕಿ
೪೯. ಭೀಷ್ಮದೇವ ಮಾಣಿಕರಾವ ಮೊರೆ ಮೆಹಕರ
೫೦. ಮಡಿವಾಳಯ್ಯ ಮಾದಯ್ಯಾ ಸ್ವಾಮಿ, ಭಾಲ್ಕಿ
೫೧. ಮಲ್ಲಿಕಾರ್ಜುನ ಗುರುಲಿಂಗಪ್ಪ ಪರಮಾ ಭಾಲ್ಕಿ
೫೨. ಮಡೋಳಪ್ಪ ಸಂಗಪ್ಪಾ ಇಂದ್ರಾಳೆ ರಾಚಪ್ಪ ಗೌಡಗಾಂವ
೫೩. ಮಹಾರುದ್ರಪ್ಪ ವಿರೂಪಾಕ್ಷಪ್ಪ ಸಿರ್ಸೆ, ಭಾಲ್ಕಿ
೫೪. ಮಹಾದಪ್ಪ ಶಿವಲಿಂಗಪ್ಪ ಲೋಖಂಡೆ, ಭಾಲ್ಕಿ
೫೫. ಮಾಣಿಕರಾವ ಕಿಶನರಾವ ಕುಲಕರ್ಣಿ ಮೇಥಿ ಮೇಳಕುಂದಾ
೫೬. ಮಾಧವರಾವ ಅನೋಬಾರಾವ ಕಾಳೆ, ಹಾಳಗೋರ್ಟಾ
೫೭. ಮಾಧವರಾವ ಕೆರಬಾ ಸಂಗನಾಳೆ ಮೆಹಕರ
೫೮. ಯಶವಂತರಾವ ಕೇಶವರಾವ ಪವಾರ ಸಾಯಗಾಂವ
೫೯. ರಂಗನಾಥರಾವ ಕುಲಕರ್ಣಿ ಸಾಯಗಾಂವ
೬೦. ರಘುನಾಥರಾವ ಗಣಪತರಾವ ಕಾನೋಜಿ ಬೊಳೆಗಾಂವ
೬೧. ರತನದಾಸ ರಾಮಚರಣದಾಸ ಬೈರಾಗಿ, ಭಾಲ್ಕಿ
೬೨. ರಾಚಯ್ಯ ಸಂಗಯ್ಯ ಸ್ವಾಮಿ, ಡಾವರಗಾಂವ
೬೩. ರಾಮ ಕಿಶನರಾವ ಮೊರೆ ಮೆಹಕರ
೬೪. ರಾಮಚಂದ್ರ ಪ್ರಹ್ಲಾದ ದೇಶಪಾಂಡೆ ಸಾಯಗಾಂವ
೬೫. ರಾಮಚಂದ್ರ ಸಾಯಿಬಣ್ಣ ಕೊಳಿ ಮೆಹಕರ
೬೬. ರಾಮಚಂದ್ರ ಸೂರ್ಯವಂಶಿ ಭಾಲ್ಕಿ
೬೭. ರಾಮಜಿ ಆನಂದರಾವ ಮೊರೆ ಮೆಹಕರ
೬೮. ರಾಮಜಿ ವಿಠೋಬಾ ಹಂಗರಗೆ ಮೇಹಕರ



೬೯. ರಾಮರಾವ ಗುಂಡೇರಾವ ಕುಲಕರ್ಣಿ ಮೇಥಿ ಮೆಳಕುಂದಾ
೭೦. ರಾಮರಾವ ಬಾಪುರಾವ ಕುಲಕರ್ಣಿ ಮೆಹಕರ
೭೧. ರಾಮರಾವ ಶಿವಬಾ ಪವಾರ ಸಾಯಗಾಂವ
೭೨. ರಾಯಪ್ಪ ಸಿದ್ದಪ್ಪ ಢೋಳೆ ಸಾಯಗಾಂವ
೭೩. ಲಿಂಬಾಜಿ ವಿಠೋಬಾ ಬಿರಾದಾರ ಅಟ್ಟರ್ಗಾ
೭೪. ವಿಠಲ ತುಕಾರಾಮ ಪಾಟೀಲ ಮೆಹಕರ
೭೫. ವಿವೇಕಾನಂದ ಝುಟಿಂಗರಾವ ಗಣೂರೆ ಭಾಲ್ಕಿ
೭೬. ವೀರಸಂಗಪ್ಪ ಬಿರಾದಾರ, ಭಾತಂಬ್ರಾ
೭೭. ವಿಶ್ವನಾಥರಾವ ಮಾಧವರಾವ ಹಸೂರೆ ಮೇಹಕರ
೭೮. ವೆಂಕಟರಾವ ಗಂಗಾರಾಮ ಪಾಟೀಲ ಮಾಣಕೇಶ್ವರ
೭೯. ವೆಂಕಟರಾವ ಭೀಮರಾವ ಪಾಟೀಲ ಹುಪಳಾ
೮೦. ಶಂಕರ ಗಣಪತರಾವ ಕಾನೋಜಿ ಬೊಳೆಗಾಂವ
೮೧. ಶಂಕರ ಧೊಂಡಿಬಾ ಶಿಂಧೆ ಭಾಲ್ಕಿ
೮೨. ಶಂಕರರಾವ ಮಾನೆ ಭಾಲ್ಕಿ
೮೩. ಶಂಕರರಾವ ಮಾಧವರಾವ ಸಾವರೆ ಸಾಯಗಾಂವ
೮೪. ಶಿವರಾಮ ಶ್ರೀಮಳೆ ಮೆಹಕರ
೮೫. ಶಿವಶರಣಪ್ಪ ಇಟಗೆ ಭಾಲ್ಕಿ
೮೬. ಶಿವಶರಣಪ್ಪ ಛತ್ರೆಪ್ಪ ಪಾಟೀಲ ಭಾಸಗಿಕರ ಧನ್ನೂರಾ
೮೭. ಶ್ರೀಪತಿ ಗುಂಡಪ್ಪ ಚೆನ್ನಪ್ಪನವರ ಕುರುಬಖೇಳಗಿ
೮೮. ಸಮೃತರಾವ ಯಾದವ ಭಾಡಸಾಂಗವಿ
೮೯. ಸಿದ್ರಾಮಪ್ಪ ಮಹಾದಪ್ಪ ಆರ್ಯ ಮೆಹಕರ
೯೦. ಸೋಪಾನ ಯಶವಂತರಾವ ಅಟ್ಟರ್ಗಾ

೯೧. ಸ್ವರೂಪಾನಂದ ಮಾಣಿಕರಾವ ಮೊರೆ ಮೇಹಕರ

೯೨. ಹಣಮಂತರಾವ ಜಾಧವ ರಾಚಪ್ಪಗೌಡಗಾಂವ

೯೩. ಜ್ಞಾನೋಬಾ ಗಂಗಾರಾಮ ಪಾಟೀಲ ಮಾಣಕೇಶ್ವರ

❖ ❖ ❖

**ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ**
**ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ**

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಯ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ನೆಹರು ಮೈದಾನ | ಡಾ. ವಸಂತ ಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಚಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಸತೀಶ ಕೆ. | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |